ವಿಜಯಪುರ | ಸಂಪುಟ 04 | ಸಂಚಿಕೆ 136 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ


Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ಜುಲೈ, 19, 2026

"ಕೆಲವರಿಗೆ ಬೇಸಿಕ್ ಕಾಮನ್ ಸೆನ್ಸ್ ಇಲ್ಲ, ನೀವು ನಮ್ಮ ಕೆಲಸ ಮಾಡಿಕೊಟ್ಟಿಲ್ಲ ಎಂದರೆ ಮುಂದಿನ ಚುನಾವಣೆಯಲ್ಲಿ ನಿಮಗೆ ಬುದ್ಧಿ ಕಲಿಸ್ತೀವಿ ಅಂತಾರೆ, ಯಾರು ಬುದ್ಧಿ ಕಲಿಸ್ತಾರೆ? ಜನರಿಗೆ ಸಹಾಯ ಮಾಡಲು ನನಗೆ ದೇವರು ಅಧಿಕಾರ ಕೊಟ್ಟಿದ್ದಾನೆ."



■ ಡಿ.ಕೆ. ಶಿವಕುಮಾರ
ಮುಖ್ಯಮಂತ್ರಿಗಳು

## ಪೌರ ಸೇವಾ ನೌಕರರ ಸೇವಾ ಸಂಘ: ಪದಾಧಿಕಾರಿಗಳ ಆಯ್ಕೆ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಇಲ್ಲಿಯ ನಗರಸಭೆಯಲ್ಲಿ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸೇವಾ ಸಂಘದ ವತಿಯಿಂದ ನೂತನ ಶಾಖಾ ಪದಾಧಿಕಾರಿಗಳ ಆಯ್ಕೆ ಸಭೆ ಯಶಸ್ವಿಯಾಗಿ ನಡೆಯಿತು.

ಸಭೆಯಲ್ಲಿ ಸರ್ವಾನುಮತದಿಂದ ಶಾಖಾ ಅಧ್ಯಕ್ಷರಾಗಿ ಕಲ್ಲಪ್ಪ ಚೌರ, ಉಪಾಧ್ಯಕ್ಷರಾಗಿ ಈರಬಸು ಮಾದರ, ಕಾರ್ಯದರ್ಶಿಯಾಗಿ ಜಗದೀಶ ದೊಡ್ಡಮನಿ, ಖಜಾಂಚಿಯಾಗಿ ಅಲ್ತಾಫ್ ಮುಜಾವರ್, ಸಂಘಟನಾ ಕಾರ್ಯದರ್ಶಿಯಾಗಿ ಪರಶುರಾಮ ಜವಳಗಿ, ಸಹ ಸಂಘಟನಾ ಕಾರ್ಯದರ್ಶಿಯಾಗಿ ಅನಿಲ್ ಚೌರ ಹಾಗೂ ಗೌರವಾಧ್ಯಕ್ಷರಾಗಿ ನಬಿರಸೂಲ್ ಉಸ್ತಾದ್ ಅವರನ್ನು ಆಯ್ಕೆ ಮಾಡಲಾಯಿತು.

ಆಯ್ಕೆ ಸಭೆಯಲ್ಲಿ ನಗರಸಭೆ ಪೌರಾಯುಕ್ತ ರವಿ ಸಿರಗುಪ್ಪ, ಕಚೇರಿ ಸಿಬ್ಬಂದಿ ಸಿದ್ದು ಅಂಗಡಿ, ಪರಶುರಾಮ, ಅನಿಲ ಸೇರದಂತೆ ನೀರು ಸರಬರಾಜು ವಿಭಾಗದ ಸಿಬ್ಬಂದಿ, ಪೌರಕಾರ್ಮಿಕರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದು, ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸೇವಾ ಸಂಘದ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಭೀಮಾಶಂಕರ ಕಾಂಬಳೆ ಅವರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

## ಮಕ್ಕಳಲ್ಲಿ ನಾಯಕತ್ವದ ಗುಣ ಬೆಳೆಸಲು ಶಾಲಾ ಸಂಸತ್ತು ಸಹಾಯಕ




■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಮಕ್ಕಳಲ್ಲಿ ಶಾಲಾ ಸಂಸತ್ತಿನ ಕಲ್ಪನೆಯನ್ನು ಮೂಡಿಸುವುದರಿಂದ ಮಕ್ಕಳಲ್ಲಿ ನಾಯಕತ್ವದ ಗುಣವನ್ನು ಬೆಳೆಸುವಲ್ಲಿ ಸಹಾಯಕವಾಗುತ್ತದೆ ಎಂದು ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಹೇಳಿದರು.

ನಗರದ ನಾಗೂರ ಬಡಾವಣೆಯ ವಿದ್ಯಾನಿಕೇತನ ಕನ್ನಡ ಮಾಧ್ಯಮ ಪ್ರಾಥ-ಮಿಕ ಶಾಲೆ ಹಾಗೂ ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಸಹಯೋಗದಲ್ಲಿ ಮಕ್ಕಳಲ್ಲಿ ಮತದಾನದ ಜಾಗೃತಿ ಭಾಗವಹಿಸಿ ಮಾತನಾಡಿದ ಅವರು, ಮತದಾನದ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಕರ್ತವ್ಯ. ಮಕ್ಕಳಲ್ಲಿ ಮತದಾನದ ವಿವಿಧ ಹಂತಗಳನ್ನು ಬಾಲ್ಯದಲ್ಲಿಯೇ ಪರಿಚಯಿಸುವುದ-ರಿಂದ ಮಕ್ಕಳಲ್ಲಿ ಕುತೂಹಲ ಮತ್ತು ಆಸಕ್ತಿಯನ್ನು ಮೂಡಿಸಿದಂತಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ಮುಖ್ಯಗುರುಮಾತೆ ಎಮ್.ಪಿ.ಬುಕ್ಕಾ, ಮಕ್ಕಳೊಂದಿಗೆ ಶಿಕ್ಷಕರು ಒಟ್ಟುಗೂಡಿ ಮತ ಚಲಾಯಿಸಿದ್ದು ವಿಶೇಷವಾಗಿ-ತ್ತು. ಚುನಾವಣೆಯ ಮತಗಟ್ಟೆಯ ಅಧಿಕಾ-ರಿಗಳಾಗಿ ಶ್ರೀಕಾರ ಪತ್ತಾರ, ವಿಹಾನ ಜೋಶಿ, ಅನನ್ಯ ಬಿರಾದಾರ, ರಚಿತಾ ಇಂಡಿ, ಸಾನ್ವಿ ಇಂಡಿ, ಪುನಿತ ನಾರಾಯಣಕರ ಕಾರ್ಯ ನಿರ್ವಹಿಸಿದರು.

ಶಾಲಾ ಸಂಸತ್ತಿನ ಚುನಾವಣೆಯಲ್ಲಿ ವಿದ್ಯಾರ್ಥಿಗಳಾದ ಶ್ರೀರಕ್ಷಾ ಬಿರಾದಾರ, ಸಾಧನಾ ಚೌಡಿಹಾಳ, ಕೃತಿ ದೇಶಮುಖ, ಪ್ರಗತಿ ಹರನಾಳ, ಕಿರ್ತನ ಪಡಸಾಲಗಿ, ವೈಬವ ಬಾಗಲಕೋಟ, ಮಲ್ಲನಗೌಡ ಪಾಟೀಲ, ಅಂಕುಶ ಸಾತಿಹಾಳ ಸ್ಪರ್ಧಿಸಿ ಮತಯಾಚಿಸಿದರು. ಬೋಧಕ ಸಿಬ್ಬಂದಿಗಳಾದ ಸತೀಶ ಕುಲಕರ್ಣಿ, ಕಿರಣ ಕುಲಕರ್ಣಿ, ಸನತ ಕುಲಕರ್ಣಿ, ಅಲ್ತಾಪ ತಾಂಬೋಳಿ, ಅಕ್ಷಯ ಯಲಗಟ್ಟಿ, ಶ್ರೀಕಾಂತ ಹೂನಳ್ಳಿ, ಎಸ್.ಬಿ.ಕುಂಟೋಜಿ, ಸಂತೋಷ ನಾಯಕ, ಎಸ್.ಎಸ್.ಯಂಕಂಚಿ, ಎಮ್.ಎಮ್. ಜುಮನಾಳ, ಬಿ.ಎಸ್.ಪಾಟೀಲ, ಎಸ್‌ವ್ಹಿ.ಕಡಣಿ, ಎಮ್.ಜಿ. ದ್ಯಾಮಗೊಂಡ, ವಿ.ಎ.ನಾಯಕ, ಎಸ್.ಡಿ.ನಾಯಕ, ವಿಜಯಲಕ್ಷ್ಮಿ ಅಲಾಳಮಠ, ಸಾವಿತ್ರಿ ವೀರಾಪೂರ, ಎನ್.ಜಿ. ಬಳಗಾನೂರ, ಆರ್. ಎಮ್.ಫಕೀರಪುರ, ಆರ್.ಎಸ್.ಶಿವಸಿಂಪಿಗೇರ, ಎಸ್.ಎಸ್.ಪಾಟೀಲ, ಜಿ.ಎಸ್.ಯಂಕಂಚಿ ಮತ್ತು ಬೋಧಕೇತರ ಸಿಬ್ಬಂದಿಗಳು ಇದ್ದರು.

## ವಿಕಲಚೇತನರ ಪಿಂಚಣಿ ಮರುಚಾಲನೆಗೆ ಆಗ್ರಹ




■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ತಾಲ್ಲೂಕು ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿರುವ ವಿಕಲಚೇತನರ ಪಿಂಚಣಿ ಮರುಚಾಲನೆಗೆ ಆಗ್ರಹಿಸಿ ತಹಶೀಲ್ದಾರ ನಿಂಗಣ್ಣ ಬಿರಾದಾರ ಅವರಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯಕ್ಕೆ ಶುಕ್ರವಾರ ಆಗಮಿಸಿದ ವಿಕಲಚೇತನರ ವಿವಿಧ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಕಳೆದ ಆರು ತಿಂಗಳಿನಿಂದ ಸ್ಥಗಿತಗೊಂಡಿರುವ ಅರ್ಹ ವಿಕಲಚೇತನರ ಮಾಸಾಶನವನ್ನು (ಪಿಂಚಣಿ) ತಕ್ಷಣವೇ ಪುನರ್ ಆರಂಭಿಸಬೇಕೆಂದು ಒತ್ತಾಯಿಸಿದರು.

ಜೊತೆಗೆ ಇಲ್ಲಿನ ಎಂ.ಆರ್.ಡಬ್ಲ್ಯೂ ವಿ.ಆರ್. ಡಬ್ಲ್ಯೂ , ಯು.ಆರ್.ಡಬ್ಲ್ಯೂ ಪದಾಧಿಕಾ-ರಿಗಳು ಮುಖ್ಯಮಂತ್ರಿಗಳಿಗೆ ಬರೆದ ಮನವಿಯನ್ನು ತಹಶೀಲ್ದಾರ ಮೂಲಕ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಪದಾಧಿಕಾ-ರಿಯಾದ ಸಂಗಪ್ಪ ಸುರಗಿಹಳ್ಳಿ ಮಾತನಾಡಿ, ಪಿಂಚಣಿ ಸ್ಥಗಿತದಿಂದಾಗಿ ತಾಲ್ಲೂಕಿನ ನೂರಾರು ವಿಕಲಚೇತನರು ತೀವ್ರ ಆರ್ಥಿಕ ಸಂಕಷ್ಟ ಎದು-ರಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು.

ತಹಶೀಲ್ದಾರರ ಸಕಾರಾತ್ಮಕವಾಗಿ ಸ್ಪಂದಿಸುವುದರ ಮೂಲಕ ಮನವಿ ಸ್ವೀಕರಿಸಿ ವಿಕಲಚೇತನರ ಪಿಂಚಣಿ ಮರುಚಾಲನೆಗೆ ಅಗತ್ಯವಿರುವ ಪೂರಕ ದಾಖಲಾತಿಗಳನ್ನು ಒದಗಿಸಿದಲ್ಲಿ ತಕ್ಷಣವೇ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಅಲ್ಲದೆ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿ.ಆರ್.ಡಬ್ಲ್ಯೂ ಸಿಬ್ಬಂದಿಗಳು ತಮ್ಮ ವ್ಯಾಪ್ತಿಯಲ್ಲಿ ರದ್ದಾಗಿರುವ ಅರ್ಹ ವಿಕಲಚೇತನರ ಪಿಂಚಣಿ ವಿವರಗಳು ಮತ್ತು ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ನೇರವಾಗಿ ಕಚೇ-ರಿಗೆ ಸಲ್ಲಿಸಬೇಕು. ಇದರಿಂದಾಗಿ ವಿಕಲಚೇತನರು ಅನಾವಶ್ಯಕವಾಗಿ ತಹಶೀಲ್ದಾರ್ ಕಚೇರಿಗೆ ಅಲೆಯುವುದು ತಪ್ಪುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ವಿಕಲಚೇತನರ ಕುಂದು ಕೊರತೆಗಳನ್ನು ಆಲಿಸಲು ಮತ್ತು ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಶೀಘ್ರದಲ್ಲೇ ತಾಲ್ಲೂಕು ಮಟ್ಟದ ವಿಶೇಷ ಸಭೆಯನ್ನು ಕರೆಯಲಾಗುವುದು ಎಂದೂ ಭರವಸೆ ನೀಡಿದರು.

ತಾಲ್ಲೂಕು ಒಕ್ಕೂಟದ ಅಧ್ಯಕ್ಷ ಪರಶುರಾಮ ಯಲಗೋಡ, ಮುತ್ತುರಾಜ ಸಾತಿಹಾಳ ಶರಣಗೌಡ ಪಾಟೀಲ, ದ್ಯಾವಪ್ಪ ಪೂಜಾರಿ ,ಮೈನೂದ್ದಿನ ಮುಜಾವರ, ಚೈತ್ರಾ ನಾವಿ, ಬಸಮ್ಮ ಘಂಟಿ, ಪ್ರಕಾಶ ಪವಾರ, ಪರಮಾನಂದ ಹಡಪದ, ಬಸಪ್ಪ ಯತ್ನಾಳ ಅಶೋಕ ಕೋಟಿನ, ಮಡಿವಾಳಪ್ಪ ಒಂಟೆತ್ತಿನ, ಲಕ್ಷ್ಮಣ ಪೂಜಾರಿ, ಹಸಿಮಸಾಬ್ ಹಾದಿಮನಿ ಇದ್ದರು.

# ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

## ಬಿಡದಿ ಟೌನ್‌ಶಿಪ್: ಜೆಡಿಎಸ್ ಮತ್ತು ಬಿಜೆಪಿ ಮಧ್ಯೆಯೇ ಕ್ರೆಡಿಟ್ ವಾರ್। ಮಾಜಿ ಪ್ರಧಾನಿ ದೇವೇಗೌಡರೂ ಭಾಗಿ। ಪಾದಯಾತ್ರೆ ಪೋಸ್ಟರ್ ಬಿಡುಗಡೆ

ಬೆಂಗಳೂರು: ಬಿಡದಿ ಟೌನ್‌ಶಿಪ್ ಜಟಾಪಟಿ ಮತ್ತಷ್ಟು ತೀವ್ರಗೊಂಡಿದ್ದು, ಇದೀಗ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಡುವೆ ಕ್ರೆಡಿಟ್ ವಾರ್ ಆರಂಭವಾಗಿದೆ.

ಬಿಡದಿ ಟೌನ್‌ಶಿಪ್ ವಿರೋಧಿಸಿ ಶುಕ್ರವಾರ ಪ್ರತಿಭಟನೆ ನಡೆಸಿದ ಬಿಜೆಪಿ ಬೆಂಗಳೂರಿನಿಂದ ಬಿಡದಿಯವರೆಗೆ ಬೃಹತ್ ಪಾದಯಾತ್ರೆ ನಡೆಸುವುದಾಗಿ ಘೋಷಿಸಿತ್ತು. ಇದರ ಬೆನ್ನಲ್ಲೇ ಮಿತ್ರ ಪಕ್ಷ ಜೆಡಿಎಸ್ ಸಹ ತಾನು ಪ್ರತ್ಯೇಕವಾಗಿ ಪಾದಯಾತ್ರೆ ಮಾಡುವುದಾಗಿ ಶನಿವಾರ ಘೋಷಿಸಿದೆ.

ಜುಲೈ 30, 31 ಮತ್ತು ಆಗಸ್ಟ್ 1 ರಂದು ಸುಮಾರು 38 ಕಿಲೋಮೀಟ-ರ್‌ಗಳ ಮೂರು ದಿನಗಳ ಪಾದಯಾತ್ರೆ ನಡೆಸುವುದಾಗಿ ಜೆಡಿಎಸ್ ಘೋಷಣೆ ಮಾಡಿದೆ.



ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಅವರು ಇಂದು ಸುದ್ದಿಗೋಷ್ಠಿ ನಡೆಸಿ ಪಾದಯಾತ್ರೆ ದಿನಾಂಕ ಮತ್ತು ಪಾದಯಾತ್ರೆ ಪೋಸ್ಟರ್ ಅನ್ನು ಬಿಡುಗಡೆ ಮಾಡಿದರು.

ಜುಲೈ 30 ರಂದು ಭೈರಮಂಗಲದಿಂದ ಪಾದಯಾತ್ರೆ ಪ್ರಾರಂಭ ಆಗಿ ಆಗಸ್ಟ್ 1 ರಂದು ಫ್ರೀಡಂ ಪಾರ್ಕ್ ನಲ್ಲಿ ಪಾದಯಾತ್ರೆ ಅಂತ್ಯವಾಗಲಿದೆ. ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಈ ಪಾದಯಾತ್ರೆ ನಡೆಯಲಿದೆ. ಪಾದಯಾತ್ರೆಗೆ ಕೇಂದ್ರ ಸಚಿವ ಕುಮಾರಸ್ವಾಮಿ ಚಾಲನೆ ನೀಡಲಿದ್ದಾರೆ ಎಂದು ಜೆಡಿಎಸ್ ನಾಯಕರು ತಿಳಿಸಿದರು.

ಜುಲೈ 31 ರಂದು ಮಾಜಿ ಪ್ರಧಾನಿ ದೇವೇಗೌಡ ಪಾದಯಾತ್ರೆಯಲ್ಲಿ ಭಾಗಿಯಾಗಲಿದ್ದಾರೆ. ಆಗಸ್ಟ್ 1 ರಂದು ಪಾದಯಾತ್ರೆ ಫ್ರೀಡಂ ಪಾರ್ಕ್‌ನಲ್ಲಿ ಅಂತ್ಯವಾಗಲಿದೆ.

ಅಂದು ಬೃಹತ್ ಸಮಾವೇಶದ ಮೂಲಕ ಬಿಡದಿ ಟೌನ್‌ಶಿಪ್ ಯೋಜನೆ ರದ್ದು ಮಾಡುವಂತೆ ಜೆಡಿಎಸ್ ಆಗ್ರಹ ಮಾಡಲಿದೆ ಎಂದು ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ ತಿಳಿಸಿದ್ದಾರೆ.

ಸರ್ಕಾರ ಈ ಯೋಜನೆ ರದ್ದು ಮಾಡೋವರೆಗೂ ಜೆಡಿಎಸ್ ಹೋರಾಟ ಮಾಡಲಿದೆ. ಪಾದಯಾತ್ರೆ ಬಳಿಕ ವಿಧಾನಸೌಧ ಚಲೋ ಸಹ ಮಾಡ್ತೀವಿ. ಬಿಜೆಪಿಗೂ ಮೊದಲೇ ನಾವು ಪಾದಯಾತ್ರೆಗೆ ನಿರ್ಧಾರ ಮಾಡಿದ್ವಿ. ಅದರಂತೆ ಇಂದು ಘೋಷಣೆ ಮಾಡಿದ್ದೇವೆ ಎಂದು ಕೃಷ್ಣಾರೆಡ್ಡಿ ಹೇಳಿದರು.

# ನಾಡು-ನುಡಿ, ನೆಲ-ಜಲದ ಅಭಿಮಾನ ಇರಬೇಕು: ಮನಗೂಳಿ

## 21 ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆ ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕನ್ನಡ ನಾಡಿನ ಪ್ರತಿ ವ್ಯಕ್ತಿಗೂ ಕನ್ನಡ ನಾಡು-ನುಡಿ, ನೆಲ-ಜಲದ ಅಭಿಮಾನ ಇರಬೇಕು. ಅಂ-ದಾಗ ಮಾತ್ರ ಕನ್ನಡ ನಾಡಿನ ಹಿರಿಮೆ-ಗರಿಮೆಯನ್ನು ದೇಶಾದ್ಯಂತ ಪಸರಿಸಲು ಸಾಧ್ಯ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ 21ನೆಯ ಜಿಲ್ಲಾ ಸಮ್ಮೇಳನದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಹಿರಿಯರು ಹಾಗೂ ಮಕ್ಕಳ ಸಾಹಿತಿಗಳು ಸಾಹಿತ್ಯ ಚಟುವಟಿಕೆಗಳಲ್ಲಿ ಸಾಕಷ್ಟು ಕೃಷಿ ರಾಷ್ಟ್ರಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಹಾಗೂ ರಾಜ್ಯೋತ್ಸವ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದ ಹ.ಮ ಪೂಜಾರ ಗುರುಗಳನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ಸಿಂದಗಿ ಜನತೆ ಹಾಗೂ ಸಾಹಿತ್ಯಾಸಕ್ತರಿಗೆ ಅತ್ಯಂತ ಹರುಷ ತಂದಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಿಂದ ಸಾವಿರಾರು ಜನ ಆಗಮಿಸುವ ಕಾರಣ ಊಟೋಪಹಾರ, ಆಸನಗಳ ವ್ಯವಸ್ಥೆ ಹಾಗೂ ಅತಿಥಿಸತ್ಕಾರಗಳನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಬೇಕು. ಅಲ್ಲದೇ 14ವರ್ಷಗಳ ನಂತರ ಸಿಂದಗಿ ನಗರಕ್ಕೆ ಸಾಹಿತ್ಯ ಸಮ್ಮೇಳನ ನಡೆಸುವ ಸುಯೋಗ ಕೂಡಿ ಬಂದಿದ್ದು ಸಂತಸ. ಸಿಂದಗಿಯ ಎಲ್ಲ ಕನ್ನಡ ಅಭಿಮಾನಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಸಮ್ಮೇಳನವನ್ನು ಅದ್ದೂರಿಯಾಗಿ ಯಶಸ್ವಿಗೊಳಿಸಬೇಕು.

ಈ ಕಾರ್ಯಕ್ರಮವು ಹಲವಾರು ವೈಶಿಷ್ಟತೆಗಳಿಂದ ಕೂಡಿದ್ದು ವಿವಿಧ ಕಲಾತಂಡಗಳು, ಜಾನಪದ ಕಲಾವಿದರು, ಸೇರಿದಂತೆ ಹಲವಾರು ಕಲಾತಂಡಗಳು ಕಲಾಭಿಮಾನಿಗಳನ್ನು ರಂಜಿಸಲಿವೆ. ತಾಲೂಕಿನ ಎಲ್ಲಾ ಅಧಿಕಾರಿ ವರ್ಗದ ಸಾಕಾರದ ಜೊತೆಗೆ ಶಾಸಕರಾಗಿ ತಾವು ಕೂಡ ಸಮ್ಮೇಳನಕ್ಕೆ ಬೇಕಾದ ಸರ್ವ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿದರು.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಈಗಾಗಲೇ ಸಮ್ಮೇಳನ ತಯಾರಿಯನ್ನು ಅದ್ದೂರಿಯಾಗಿ ನಡೆಸಲಾಗುತ್ತಿದ್ದು, ಕನ್ನಡ ಅಭಿಮಾನಿಗಳಿಂದ ಅತ್ಯಂತ ಸಕಾರಾತ್ಮಕ ಬೆಂಬಲ ವ್ಯಕ್ತವಾಗುತ್ತಿದೆ. ಸಮ್ಮೇಳನದ ಮುಖ್ಯ ವೇದಿಕೆಗೆ ಸಿಂದಗಿಯ ನೀರಾವರಿ ಹರಿಕಾರ ಮಾಜಿ ಸಚಿವ ದಿ. ಎಂ.ಸಿ.ಮನಗೂಳಿಯವರ ಹೆಸರಿಡಲಾಗಿದ್ದು, ನಗರದ ಮುಖ್ಯ ದ್ವಾರಗಳಿಗೆ ಮಹಾಪುರುಷರ ಹೆಸರುಗಳನ್ನು ಇಟ್ಟು ಗೌರವ ಸೂಚಿಸುವ ಕೆಲಸ ಮಾಡಲಾಗಿದೆ. ಆಮಂತ್ರಣ ಪತ್ರಿಕೆಯಲ್ಲಿ ಜಾತಿ, ಮತ, ಪಂಥ, ಪಕ್ಷ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವ ಪ್ರಯತ್ನ ಮಾಡಲಾಗಿದೆ. ಅದಾಗ್ಯೂ ಹಲವರ ಹೆಸರುಗಳು ಉಳಿದುಕೊಂಡಿದ್ದರೆ ಅಥವಾ ಮೇಲೆ ಕೆಳಗೆಯಾಗಿದ್ದರೆ ಮನ್ನಿಸಬೇಕು. ಮುಂದಿನ ದಿನಗಳಲ್ಲಿ ಅಂತಹ ತಪ್ಪುಗಳು ಸಂಭವಿಸಿದಂತೆ ನೋಡಿಕೊಳ್ಳಲಾಗುತ್ತದೆ ಎಂದ ಅವರು ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ವಿನಂತಿಸಿದರು.

ಇದೇ ಸಂದರ್ಭದಲ್ಲಿ ತಾಲೂಕು ಕಸಾಪ ಅಧ್ಯಕ್ಷ ವೈ.ಸಿ.ಮಯೂರ, ಕಸಾಪ ಗೌ.ಕಾರ್ಯದರ್ಶಿ ಆನಂದ ಶಾಬಾದಿ ಮಾತನಾಡಿ, ಪತ್ರಿಕಾ ಬಳಗದ ಎಲ್ಲ ಮಿತ್ರರು ತಮ್ಮ ಪತ್ರಿಕೆಗಳಲ್ಲಿ ಸುದ್ದಿಗಳನ್ನು ಪ್ರಕಟಿಸಿ ಪ್ರಚಾರ ನೀಡಿ ಕಾರ್ಯಕ್ರಮದ ಯಶಸ್ಸಿಗೆ ಭಾಜನರಾಗಲು ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಕಸಾಪ ಗೌರವಾಧ್ಯಕ್ಷ ಮಹಾಂತೇಶ ಪಟ್ಟಣಶೆಟ್ಟಿ, ಗೌರವ ಸಲಹೆಗಾರ ಅಶೋಕ ಗಾಯಕವಾಡ, ಅಶೋಕ ಅಲ್ಲಾಪುರ, ಮಲ್ಲಣ್ಣ ಸಾಲಿ, ಶಾಂತು ರಾಣಾಗೋಳ, ಸಂದೀಪ ಚೌರ, ನೂರುಅಹ್ಮದ್ ಅತ್ತಾರ, ಸುನಂದಾ ಯಂಪೂರೆ, ಸೈನಾಬಿ ಮಸಳಿ, ಜಯಶ್ರೀ ಕುಲಕರ್ಣಿ, ಪುರುಷೋತ್ತಮ ಕುಲಕರ್ಣಿ ಸೇ-ರಿದಂತೆ ಸಾಹಿತ್ಯಾಭಿಮಾನಿಗಳು ಹಾಗೂ ಪದಾಧಿಕಾ-ರಿಗಳು ಇದ್ದರು.

# ಆಲಮಟ್ಟಿಯಿಂದ ನಾರಾಯಣಪುರಕ್ಕೆ ನೀರು ಬಿಡುಗಡೆ ಆರಂಭ

## ಪ್ರಥಮ ಬಾರಿಗೆ ವಿದ್ಯುತ್ ಉತ್ಪಾದನೆಯೂ ಶುರು। ರಾತ್ರಿ ನೀರಿನ ಹೊರಹರಿವು ಹೆಚ್ಚಳ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ನಾರಾಯಣಪುರ ಜಲಾಶಯಕ್ಕೆ ಕುಡಿಯುವ ನೀರಿಗಾಗಿ ಕಾಲುವೆಗೆ ನೀರು ಹರಿಸುವ ಉದ್ದೇಶದಿಂದ ಆಲಮಟ್ಟಿ ಜಲಾಶಯದಿಂದ ಶನಿವಾರ ಮೊದಲ ಬಾರಿಗೆ ಕೃಷ್ಣಾ ನದಿಗೆ ನೀರು ಬಿಡುಗಡೆ ಮಾಡಲಾಗಿದೆ.

ಜಲಾಶಯದ ಬಲಭಾಗದ ವಿದ್ಯುತ್ ಉತ್ಪಾದನಾ ಘಟಕದ ಮೂಲಕ 3,500 ಕ್ಯುಸೆಕ್ ನೀರನ್ನು ನದಿ ಪಾತ್ರಕ್ಕೆ ಹರಿಬಿಡಲಾಗುತ್ತಿದೆ. ಇದರೊಂದಿಗೆ ಪ್ರಸಕ್ತ ಹಂಗಾಮಿನಲ್ಲಿ ಇದೇ ಮೊದಲ ಬಾರಿಗೆ ವಿದ್ಯುತ್ ಉತ್ಪಾದನೆಯೂ ಆರಂಭವಾಗಿದೆ. ಹಂತ ಹಂತವಾಗಿ ನೀರನ್ನು ಬಿಡಬೇಕಾಗಿರುವುದರಿಂದ ರಾತ್ರಿ 8 ಗಂಟೆಯ ನಂತರ ಹೊರಹರಿವನ್ನು 8,000 ಕ್ಯುಸೆಕ್‌ಗೆ ಹೆಚ್ಚಿಸಲಾಗಿದೆ ಎಂದು ಆಲಮಟ್ಟಿ ಜಲಾಶಯದ ಅಧಿಕಾರಿಗಳು ತಿಳಿಸಿದರು.

### ವಿದ್ಯುತ್ ಉತ್ಪಾದನೆ ಆರಂಭ

**ಆಲಮಟ್ಟಿ ಜಲಾಶಯದ ಬಲಭಾಗದಲ್ಲಿರುವ ಜಲ ವಿದ್ಯುದಾಗಾರದ 55 ಮೆಗಾವಾಟ್ ಸಾಮರ್ಥ್ಯದ ಒಂದು ಘಟಕದಿಂದ ಶನಿವಾರ 3,500 ಕ್ಯುಸೆಕ್ ನೀರನ್ನು ನದಿಗೆ ಹರಿಸುವ ಮೂಲಕ 25 ಮೆಗಾವಾಟ್ ವಿದ್ಯುತ್ ಉತ್ಪಾದನೆ ಆರಂಭವಾಯಿತು. ರಾತ್ರಿ 8 ಗಂಟೆಗೆ ಹೊರಹರಿವು 8,000 ಕ್ಯುಸೆಕ್‌ಗೆ ಹೆಚ್ಚಿದ್ದರಿಂದ ಇನ್ನೊಂದು ಘಟಕವೂ ಆರಂಭಗೊಂಡು ಒಟ್ಟಾರೆ 70 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.**




### ಜಲಾಶಯದ ಮಟ್ಟ


ಗರಿಷ್ಠ 519.60 ಮೀಟರ್ ಎತ್ತರದಲ್ಲಿ 123.081 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಶನಿವಾರ ಸಂಜೆ 517.42 ಮೀಟರ್ ಎತ್ತರದಲ್ಲಿ 89.8 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು. ಒಳಹರಿವಿನ ಪ್ರಮಾಣ 6,091 ಕ್ಯುಸೆಕ್ ಇತ್ತು.

"ಆಲಮಟ್ಟಿ ವಿದ್ಯುದಾಗಾರದಲ್ಲಿ ಶನಿವಾರದಿಂದ ವಿದ್ಯುತ್ ಉತ್ಪಾದನೆ ಆರಂಭಗೊಂಡಿದೆ. ಈ ವರ್ಷ ಘಟಕಕ್ಕೆ 520 ದಶಲಕ್ಷ ಯುನಿಟ್ ಉತ್ಪಾದನೆಯ ಗುರಿ ನೀಡಲಾಗಿದೆ"

■ ಚಂದ್ರಶೇಖರ ದೊರೆ
ಸೂಪರಿಂಟೆಂಡೆಂಟ್ ಎಂಜಿನಿಯರ್, ಕೆಪಿಸಿಎಲ್, ಆಲಮಟ್ಟಿ

# ಅಧರಗಳ ಅಮೃತ ಮಿಲನ

■ ಉದಯರಶ್ಮಿ ದಿನಪತ್ರಿಕೆ






**ಪ್ರೀತಿಯ ಐಶ್ವರ್ಯ**

ತಂಗಾಳಿ ತೀಡುತ್ತಿದ್ದ ಚೆಂದದ ಮುಸ್ಸಂಜೆಯಲ್ಲಿ ಕಾಲೇಜಿನ ಸಾಂಸ್ಕೃತಿಕ ಸಮಾರಂಭದಲ್ಲಿ ನಿನ್ನಂದದ ವರ್ಷಧಾರೆ ಕಣ್ಣು ತುಂಬುತ್ತಿತ್ತು. ಶರತ್ಕಾಲದ ಪೂರ್ಣಚಂದಿರನ ನಾಚಿಸುವ ಮೊಗ, ಕೆಂದುಟಿಯಂಚಿನ ನಗು, ಶಿಲ್ಪಿ ಕೆತ್ತಿದ ಮೈಮಾಟ, ಕವಿಯ ಕಲ್ಪನೆಗೂ ಸಿಗದ ಅಪರೂಪದ ರೂಪ ರಾಶಿ ಅತ್ತಿಂದಿತ್ತ ಇತ್ತಿಂದಿತ್ತ ಓಡಾಡುತ್ತಿತ್ತು. ಬಂಗಾರದ ಮೈಬಣ್ಣಕ್ಕೆ ನವಿಲು ರಂಗಿನ ಮೈಸೂರು ಸಿಲ್ಕ್ ಸೀರೆಯುಟ್ಟು, ಬೆನ್ನಿಗೆ ತೋಳಿಗೆ ಡಿಸೈನ್ ಮಾಡಿಸಿದ ನೀಲಿಬಣ್ಣದ ರವಿಕೆ ತೊಟ್ಟಿದ್ದೆ. ಕೂದಲಿಗೆ ಫ್ರೆಂಚ್ ಜಡೆ ಹೆಣೆದು ಅಲ್ಲಲ್ಲಿಗೆ ಬೀಟ್ಸ್ ಹಾಕಿದ್ದೆ. ಕೈಯಲ್ಲಿ ಹಸಿರು ಚುಕ್ಕಿಯ ಬಳೆಗಳ ಕೊನೆಯಲ್ಲಿ ಹೊಳೆಯುವ ಬಂಗಾರ ಬಳೆಗಳ ಸದ್ದಿನೊಂದಿಗೆ ಬರುತ್ತಿದ್ದ ನಿನ್ನ ಕಂಡಾಗ ಒಂದು ಕ್ಷಣ ಮೈಮರೆತೆ. ಝುಳು ಝುಳು ಹರಿಯುವ ನದಿಯ ನಾದಕೆ, ನವಿಲು ಗರಿ ಬಿಚ್ಚಿ ಆಡುವ ಚೆಂದ ಕಣ್ಣಿಗೆ ಬೀಳುತ್ತಿತ್ತು. ಪ್ರೀತಿಗಾಗಿ ಕಾದ ನನ್ನ ಮನದ ಕುಲುಮೆಯಲ್ಲಿ ಬಗೆಬಗೆಯ ಬಯಕೆಗಳ ಚಿತ್ತಾರ ಮೂಡಿಸಿತ್ತು. ತುಟಿಯಂಚಿನ ಸವಿಯನ್ನು ಸವಿಯುತ್ತ ಕೈಬೆರಳು ಹಿಡಿದು ಜೊತೆಯಾಗಿ ಜೀವನಪೂರ್ತಿ ಸಾಗುವ ಹಂಬಲದ ಕನಸಿನ ಅರಮನೆ ಕಟ್ಟತೊಡಗಿತ್ತು ಹರೆಯದ ಹೃದಯ.


ನಿನ್ನ ಚೆಲುವಿನ ದರ್ಶನಕ್ಕೆ ಕಾಲೇಜಿನ ಹೈಕಳೆಲ್ಲ ಸ್ತಬ್ಧವಾಗಿ ನಿಂತಂತ್ತಿತ್ತು. ದುಂಬಿ ಹೂವನ್ನು ಕಾಡುವಂತೆ ನಿನ್ನನ್ನು ಕಾಡಬೇಕೆನಿಸಿತು. ಮಾತಾಡಿಸಲು ಹಪಹಪಿಸುವ ತುಡಿತ ಒಂದು ಕಡೆಯಾದರೆ



ಯುಗಯುಗಗಳ ದಾಹ ತಣಿಸುವ ಅಮೃತ ನೀನು ಎಂದು ಹೇಳುತ್ತಿತ್ತು ಮನಸ್ಸು ಇನ್ನೊಂದೆಡೆ. ನಿನ್ನುಸಿ–ರಿನ ಲಯದಲ್ಲಿ ನನ್ನುಸಿರು ಬೆರೆಯಬೇಕೆಂದು ಹೃದಯ ಬಡಿತ ತನ್ನ ಲಯ ತಪ್ಪಿಸಿಕೊಂಡು ಕುಣಿಯುತ್ತ ನುಡಿದಿತ್ತು. ನನ್ನ ರೆಪ್ಪೆಯಲ್ಲಿ ಅಡಗಿಸಿಕೊಂಡು ನಿನ್ನ ಕಾಯುವೆ ಎಂದಿತ್ತು ಕಣ್ಣು.

ನಿನ್ನ ಚೆಲುವಿನ ರೂಪ ಮನದ ಕನ್ನಡಿಯಲ್ಲಿ ಅಚ್ಚೊತ್ತಿ ನಿಂತಿತ್ತು. ಕೇಶರಾಶಿಯ ತಂಗಾಳಿಯಲ್ಲಿ ತೇಲುವ ಆಸೆ ಹೊತ್ತು ತಂದಿತ್ತು. ರಾತ್ರಿಯೆಲ್ಲ ನಿನ್ನದೇ ಜಪವಾದ್ದರಿಂದ ನಿದ್ರಾದೇವಿ ಹತ್ತಿರ ಸುಳಿಯಲೇ ಇಲ್ಲ. ಅದ್ಯಾವಾಗಲೋ ತಡವಾಗಿ ನನಗೆ ಗೊತ್ತಿಲ್ಲದೇ ಆವರಿಸಿಕೊಂಡಿದ್ದಳು ನಿದ್ರಾರಾಣಿ.. ಹೀಗಾಗಿ ಅಂದು ಏಳುವುದು ತಡವಾಯಿತು. ಯಾರೋ ಜೋರಾಗಿ ಬಾಗಿಲು ಬಡೆದ ಸದ್ದಿಗೆ ಎಚ್ಚರವಾಯಿತು. ದೃಷ್ಟಿ ಗೋಡೆಯ ಮೇಲಿದ್ದ ಗಡಿಯಾರದ ಮೇಲೆ ಬಿತ್ತು. ಮುಳ್ಳು ಆಗಲೇ ಒಂಭತ್ತು ಗಂಟೆ ತೋರುತ್ತಿತ್ತು. ಇನ್ನರ್ಧ ಗಂಟೆಯಲ್ಲಿ ನಿತ್ಯ ಕರ್ಮಗಳನ್ನು ಮುಗಿಸಿ ಕಾಲೇಜಿನಲ್ಲಿರಬೇಕೆಂದು ತಟ್ಟನೆ ಹಾಸಿಗೆಯಿಂದ ಎದ್ದೆ. ಗಡಿಬಿಡಿಯಲ್ಲಿ ಹಾಸ್ಟೆಲ್‌ನಲ್ಲಿ ಟಿಫನ್ ಮಾಡದೇ ಕಾಲೇಜಿನ ಕ್ಯಾಂಪಸ್ ಬಳಿಯಿದ್ದೆ.

ಅದೇ ಸಮಯದಲ್ಲಿ ಸುಂದರ ಪಾರಿವಾಳದಂತಿ–ದ್ದ ನೀನು ಕಣ್ಣಿಗೆ ಬಿದ್ದೆ. ಸ್ಕೂಟಿಯಲ್ಲಿ ಬಂದಿದ್ದರಿಂದ ಹೆಲ್ಮೆಟ್ಟಿನಿಂದಾಗಿ ಕೂದಲು ಕೆದರಿತ್ತು. ಅವಸರವಸರವಾಗಿ ಮುಂದೆ ಬಂದೆ. ಅಲ್ಲೇ ನಿಂತಿದ್ದ ಕಾರಿನ ಗಾಜಿನಲ್ಲಿ ನಿನ್ನ ಬಿಂಬ ನೋಡುತ್ತ ದಟ್ಟವಾದ ಕಪ್ಪು ಕೇಶರಾಶಿ ಬಿಚ್ಚಿ ಮತ್ತೆ ಸರಿಯಾಗಿ ಕ್ಲಿಪ್ ಹಾಕಿದ್ದೆ. ಲೋಕವನ್ನೇ ಮರೆತಂತೆ ನಿನ್ನನ್ನು ನೋಡುತ್ತ ಕಳೆದುಹೋದೆ. ನೀನು ಮಾತ್ರ ಆತುರಾತುರವಾಗಿ ಕ್ಲಾಸಿನ ರೂಮಿನೊಳಕ್ಕೆ ಹೊಕ್ಕೆ. ನಿನ್ನನ್ನು ಹಿಂಬಾಲಿಸಿದ ನಾನೂ ಕ್ಲಾಸಿನಲ್ಲಿದ್ದೆ.




ಅಂದಿನ ಪಾಠ ಎಲ್ಲ ತಲೆ ಮೇಲೆ ಹಾರಿಹೋಗಿತ್ತು. ಇಡೀ ಪಿರಿಯಡ್ ನಿನ್ನ ಮುಗ್ಧತೆಯ ಹಾವಭಾವ ಕದ್ದುಮುಚ್ಚಿ ನೋಡುವುದರಲ್ಲೇ ಕಳೆದಿದ್ದೆ. ನಡುವೆ ನೀನು ನನ್ನತ್ತ ಓರೆಗಣ್ಣಲ್ಲಿ ನೋಡಿದಾಗ ಹಾರ್ಟಬೀಟ್ ಆಕಾಶಕ್ಕೆ ಮುಟ್ಟಿತ್ತು. 'ಕಳ್ಳ ಸಿಕ್ಕು ಬಿದ್ದ' ಎಂದಂತಿದ್ದ ನಿನ್ನ ನೋಟ ಮುಖದಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಅದು ಮೊದಲ ಅನುಭವವಾದರೂ ಅದರಲ್ಲಿ ಏನೋ ಒಂದು ಹಿತವಿತ್ತು. ಹೇಳಿಕೊಳ್ಳಲಾಗದ ಸಂತೋಷವಿತ್ತು.

ಪಿರಿಯಡ್ ಮುಗಿಯುವಷ್ಟರಲ್ಲಿ ಹತ್ತೂವರೆ ಹೊಡೆದಿತ್ತು. ಹೊಟ್ಟೆ ತಾಳ ಹಾಕುತ್ತಿತ್ತು. ಶನಿವಾರವಾದ್ದರಿಂದ ಕಾಲೇಜಿನ ಕ್ಯಾಂಟೀನಿಗೆ ಬೀಗ ಬಿದ್ದಿತ್ತು. ತುಂಟ ನಗು ಬೀರುತ್ತ ಅಕ್ಕರೆ ತೋರುತ್ತ, 'ನನಗೆ ಗೊತ್ತು ಆಕಾಶ ನೀವೂ ಟಿಫನ್ ಮಾಡಿಲ್ಲ. ಅಮ್ಮ ಇವತ್ತು ಇಡ್ಲಿ ಚಟ್ನಿ ಕಟ್ಟಿದ್ದಾರೆ. ಬನ್ನಿ ಕೂಡಿ ಟಿಫನ್ ಮಾಡೋಣ ಎಂದಾಗ ಆಕಾಶ ಮೂರೇಗೇಣು ಉಳಿದಿತ್ತು. ಹಸಿದ ಹೊಟ್ಟೆ, ಬಾಯಿಯಿಂದ ತುಂಬಾ ತುಂಬಾ ಧನ್ಯವಾದ ಎಂದು ಹೇಳಿಸಿತ್ತು. ಈ ನನ್ನ ಮನದರಸಿ ಹೀಗೆ ನನ್ನ ಜೊತೆಗೆ ಕೊನೆವರೆಗೂ ಬಾಳ ಗೆಳತಿಯಾದರೆ ಎಷ್ಟು ಸೊಗಸು ಎಂದು ಮನಸ್ಸು ಹೇಳಿತ್ತು. ಆದರೆ ಇದುವರೆಗೂ ನನ್ನ ಭಾವನೆಯನ್ನು ಎಂದೂ ನಿನ್ನ ಬಳಿ ಹೇಳದೇ ನಿನಗೆ ಗೊತ್ತಾಗುವುದಾದರೂ ಹೇಗೆ?

ನಿನಗೆ ಹೇಳದೇ ಕೇಳದೇ ನಾನು ಮಾತ್ರ ಹುಚ್ಚನಂತೆ ನಿನ್ನ ಪ್ರೀತಿಸುತ್ತಿದ್ದೆ. ನಿನ್ನ ನೋಡದಿದ್ದರೆ ಹುಚ್ಚು ಹಿಡಿದಂತೆ ಅನಿಸುತ್ತಿತ್ತು. ನೀನಿಲ್ಲದ ರವಿವಾರ ಒಂದು ಯುಗವನ್ನು ಕಳೆದಂತೆ ಅನಿಸುತ್ತಿತ್ತು. ನಿನ್ನ ನಗುವ ಸುಂದರ ಮೊಗವ ಕಾಣುವ ಭಾಗ್ಯ ಸೋಮವಾರ ಸಿಗುತ್ತಿತ್ತು ದೇಹ ಮಾತ್ರ ಹಾಸ್ಟೆಲಿನಲ್ಲಿ ಇರುತ್ತಿತ್ತು. ಹೃದಯ ನಿನ್ನ ಇರುವಿಕೆಯನ್ನು ಅನುಭವಿಸುತ್ತಿತ್ತು. ಕಣಕಣದಲ್ಲೂ ನೀನೇ ಬೆರೆತು ನನ್ನ ಉಸಿರಾಗಿ ಬಿಟ್ಟಂತೆ ಭಾಸವಾಗುತ್ತಿತ್ತು. ನೀನಿಲ್ಲದೇ ನಾನಿಲ್ಲ ಎಂಬ ನಿರ್ಧಾರಕ್ಕೆ ಮನಸ್ಸು ಬಂದಿತ್ತು. ನನ್ನೆದೆಯಲ್ಲಿ ನೀನು ಮನೆ ಮಾಡಿದ ವಿಷಯವನ್ನು ಪಾರ್ಕಿನಲ್ಲಿ ಭೇಟಿಯಾಗಿ ಹೇಳಿಬಿಡಬೇಕೆಂದು ಮನಸ್ಸು ಬಿಡದೇ ಕಾಯುತ್ತಿತ್ತು. ಸದಾ ನಿನ್ನದೇ ಯೋಚನೆಯಲ್ಲಿ ಕಳೆದು ಹೋಗಿರುತ್ತಿದ್ದ ನನ್ನ ಕಂಡ ಗೆಳೆಯರು 'ಐಶು ಐಶೂ' ಎಂದು ಕಾಲೆಳೆಯುತ್ತಿದ್ದರು.

ನೀನು ಪ್ರೀತಿಗೆ ಒಪ್ಪಿದ್ದು ನಿಧಿ ಸಿಕ್ಕಷ್ಟು ಖುಷಿ ತಂದಿತ್ತು. ನನ್ನಲ್ಲಿದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ನಿನ್ನನ್ನು ಸಮುದ್ರ ತೀರಕೆ ಕರೆದಿದ್ದೆ. ಹೊಂಬಣ್ಣದ ಸಂಜೆ ಸಮುದ್ರದ ತೀರದ ಮರಳರಾಶಿಯಲ್ಲಿ ನಿನ್ನ ಹೆಜ್ಜೆಗಳನ್ನು ಅನುಸರಿಸುತ್ತಿದ್ದವು ಕಾಲುಗಳು. ಮೋಡಗಳ ಮರೆಯಿಂದ ಇಣುಕುತ್ತಿದ್ದ ಸೂರ್ಯನಂತೆ ನಿನ್ನ ತುಂಬಿದೆದೆಯ ಸೀಳು ಇಣುಕುತ್ತಿತ್ತು. ಆ ಕ್ಷಣ ಎದೆಯಲ್ಲಿ



ಒಂದು ವಿನೂತನ ಪುಳಕ ಉಂಟಾಗಿತ್ತು. ಮೊದಲ ಸಲ ಹತ್ತಿರ ಬಂದಾಗ ಹೃದಯದ ಒಳಗೆ ಏನೋ ಹೊಸ ನಡುಕ ಉಂಟಾಗಿತ್ತು. ಕಣ್ಣುಗಳು ಕಲೆತಿದ್ದವು. ಇಬ್ಬರಿಗೂ ಅರಿವಿಲ್ಲದೇ ಕೈಬೆರಳುಗಳು ಹೆಣೆದುಕೊಂಡಿದ್ದವು. ಮೊದಲ ಸ್ಪರ್ಶದಲ್ಲಿ ನಾಚಿಕೆಯಿಂದ ಕಣ್ಣುಮುಚ್ಚಿದಾಗ ಹೊಸ ಲೋಕವೇ ತೆರೆದಂತಾಯಿತು.

ಜಗದ ಎಲ್ಲ ಯೋಚನೆಗಳು ಮರೆತು ಹೋದವು. ಇಬ್ಬರ ಉಸಿರು ಒಬ್ಬರಿಗೊಬ್ಬರಿಗೆ ತಾಕುತ್ತಿತ್ತು. ಕ್ರಮೇಣ ಇಬ್ಬರ ನಡುವಿನ ಅಂತರ ಕರಗಿತ್ತು. ಮೆಲ್ಲಗೆ ನೀ ಹೆಗಲ ಮೇಲೆ ಕೈ ಇಟ್ಟಾಗ ಕನಸುಗಳೆಲ್ಲ ನನಸಾದಂತೆ ಅನಿಸಿತು. ಸಂಜೆ ಚಂದಿರ ನಮ್ಮಿಬ್ಬರ ನೋಡಿ ನಗುತ್ತಿದ್ದ. ತಂಗಾಳಿಯು ಇಬ್ಬರನ್ನು ಮತ್ತಷ್ಟು ಸನಿಹ ತಂದಿತ್ತು. ನಾಚಿಕೆಯಿಂದ ಕೆಂಪೇರಿದ ಕೆನ್ನೆಯನ್ನು ನವಿರಾಗಿ ಸವರಿದೆ. ಆಗ ಇಬ್ಬರ ಎದೆಯ ಬಡಿತ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಮೆಲ್ಲನೆ ಹೆಜ್ಜೆ ಇಟ್ಟು ಕಣ್ಣು ಮುಚ್ಚಿ ಎದೆಗೆ ಒರಗಿದಾಗ ಮೈಯಿಂದ ಸೂಸಿದ ಮುಡಿದ ಮಲ್ಲೆಯ ಸುವಾಸನೆ ನನ್ನನ್ನು ಆವರಿಸಿತು. ಅಧರಗಳ ಮೇಲಿನ ತೇವ ನೋಡುತ್ತಿದ್ದರೆ ತಡೆಯಲಾರದೇ ಸಿಹಿದುಟಿಗಳಿಗೆ ಬಿಡದೇ ಮುತ್ತಿಕ್ಕಬೇಕೆನಿಸಿತ್ತು. ಮೊದಲ ಚುಂಬನದ ಬಿಸಿಗೆ ಇಬ್ಬರ ದೇಹದಲ್ಲಿ ಸಣ್ಣದೊಂದು ನಡುಕ ತಾನಾಗಿಯೇ ಮೂಡಿತ್ತು. ಮಾತಿಲ್ಲದ ಆ ಪ್ರೀತಿ ಕಂಡು ದೂರದ ಚಂದಿರ ನಾಚಿ ನಗುತ್ತಿದ್ದ.

ಮೊದಲ ಸಲದ ಚುಂಬನ ಸವಿದು ನಾಲ್ಕು ವರ್ಷಗಳೇ ಕಳೆದಿವೆ. ಇಬ್ಬರೂ ಈಗ ಕೆಲಸದಲ್ಲಿದ್ದೇವೆ. ಮನೆಯಲ್ಲಿ ಮದುವೆಗೆ ಹಸಿರು ನಿಶಾನೆ ಸಿಕ್ಕು ದಾಂಪತ್ಯ ಬಂಧನದಲ್ಲಿ ಬಂಧಿಯಾಗಲು ತುದಿಗಾಲಲ್ಲಿದ್ದೇವೆ. ಸುಖ ದುಃಖಗಳ ಆಚೆಗಿನ ದಾಹ ತಣಿಸುವ ಪ್ರೇಮ ಲೋಕದಲ್ಲಿ ತೇಲುವಾಸೆ. ನಿನ್ನ ಹೆಗಲ ಮೇಲಿನ ಸುಖದ ಸುಪ್ಪತ್ತಿಗೆಯಲ್ಲಿ ನನ್ನನ್ನು ನಿನ್ನಲ್ಲಿ ಕಳೆದುಕೊಳ್ಳುವ ಆಸೆ ತೀವ್ರಗೊಳ್ಳುತ್ತಿದೆ. ನಿನ್ನ ಪಾದದ ಧೂಳಿಗೆ ಹೂಗನಸುಗಳ ಹಾಸಿ, ನಿನ್ನ ಸೌಂದರ್ಯದ ಮಹಾಸಾಗರದಲ್ಲಿ ಸಂಪೂರ್ಣವಾಗಿ ಮುಳುಗಿ ಮರಳಿ ದಡ ಸೇರದಂತೆ ಕರಗಿಹೋಗಬೇಕೆಂಬ ಹಂಬಲ ಹೆಚ್ಚಾಗುತ್ತಿದೆ. ಪ್ರಥ–'ಮ ಮಿಲನದ ಶುಭ ಮುಹೂರ್ತದಲ್ಲಿ ನಾಚಿಕೆಯ ಮುಸುಕಿನಲ್ಲಿ ನೀ ಕರಗುತಿರಲು ಹೃದಯ ವೀಣೆ ತಾನೇ ಮಿಡಿದು ಮೌನವೇ ಪ್ರೇಮಕಾವ್ಯ ನುಡಿಸುವ ಸುಂದರ ಕ್ಷಣಕ್ಕೆ ಕಾಯುತ್ತಿದ್ದೇನೆ ಬಂದು ಬಿಡು ಬೇಗ..

**ಇಂತಿ ನಿನ್ನ ಪ್ರೀತಿಯ ಆಕಾಶ**

**ಲೇಖನ**
**– ಜಯಶ್ರೀ.ಜೆ. ಅಬ್ಬಿಗೇರಿ.**
**ಇಂಗ್ಲೀಷ್ ಉಪನ್ಯಾಸಕರು**
**ಬೆಳಗಾವಿ**
**ಮೊ: 9449234142**



---

**500 ಕ್ಕೂ ಹೆಚ್ಚು ಅಂಕಗಳಿಸಿದ 63 ವಿದ್ಯಾರ್ಥಿಗಳು । ಚನ್ನವಿರೇಶ ಕುಂಬಾರವರ ಗೆ 651 ಅಂಕಗಳು**

# ನೀಟ್‌ನಲ್ಲಿ ಐತಿಹಾಸಿಕ ಫಲಿತಾಂಶ ನೀಡಿದ ಎಕ್ಸಲಂಟ್ ಕಾಲೇಜ್

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹಲವು ಅಡ್ಡಿ ಆತಂಕಗಳ ಕರಗಿ ಬಹು ನಿರೀಕ್ಷಿತ 2026ನೇ ಸಾಲಿನ ನೀಟ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ಎಕ್ಸಲಂಟ್ ವಿಜ್ಞಾನ ಪದವಿಪೂರ್ವ ಕಾಲೇಜು ಮತ್ತೊಮ್ಮೆ ಐತಿಹಾಸಿಕ ಫಲಿತಾಂಶವನ್ನು ನೀಡುವಲ್ಲಿ ಯಶಸ್ವಿಯಾಗಿದೆ.

720 ಅಂಕಗಳಿಗೆ ಚನ್ನವಿರೇಶ ಕುಂಬಾರವರ 651 ಅಂಕಗಳಿಸಿದರೆ ಸಲ್ಮಾನ ಗೋಡಿಹಾಳ 631, ಗಂಗಾಧರ ಮುತ್ತಗಿ 613, ಮಹೇಶ ಉಳ್ಳಾಗಡ್ಡಿ 612, ರುಮೇಜ್ ಶೇಖ್ 600 ಸೇರಿದಂತೆ 5 ವಿದ್ಯಾರ್ಥಿಗಳು 600 ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿರುತ್ತಾರೆ.

ಅದರಂತೆ ಬಸನಗೌಡ ಎ ಬೈರವಾಡಗಿ (582), ಪವಿತ್ರಾ ಹೆಚ್ ಹನಗಂಡಿ (580), ಅನುಷ್ಕಾ ಎ ಮಹಿಶಾಳೆ(579), ಸ್ನೇಹಾ ಎಂ ಪಟ್ಟಣಶೆಟ್ಟಿ(577), ಪ್ರಜ್ವಲ್ ಅವಟಿ(576), ದೃಶ್ಯಾ ವಿರೇಶ ಶೆಟ್ಟಿ(574), ಪ್ರತೀಕ್ ಪಿ. ಚವ್ಹಾಣ (571), ಭೂಮಿಕಾ ಎಸ್ ಹಳ್ಳಿ (571), ಸಾಗರ ಮಲ್ಲಪ್ಪ ಬನಹಟ್ಟಿ (571), ಆಕಾಶ ಎಸ್ ಸತ್ತಿಗೇರಿ (570), ವಿನಾಯಕ ಎಸ್ ಪಾಯಣ್ಣವರ(568), ಸೃಷ್ಟಿ ಎಸ್. ಜತ್ತಿ(564), ಮಲ್ಲಿಕಾರ್ಜುನ ಕೆ ಹೂಗಾರ(562), ಪೂರ್ವಿ ಜಿ ಮಂಟೂರ(561), ಧೈರ್ಯಶೀಲ ಬಾಳಾಸಾಹೇಬ ಹವಾಲ್ದಾರ(558) ಸೇರಿದಂತೆ 63 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು 500 ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದು ಎಕ್ಸಲಂಟ್ ಶಿಕ್ಷಣ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಫಲಿತಾಂಶದ ಕುರಿತು ಮಾತನಾಡಿ ಹರ್ಷವ್ಯಕ್ತಪಡಿಸಿದ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರ್‌ಮನ್ ಬಸವರಾಜ್ ಕೌಲಗಿ; ಗೊಂದಲಗಳ ಮಧ್ಯದಲ್ಲಿಯೇ ನಮ್ಮ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜು ಹಾಗೂ ನೀಟ್ ಅಕಾಡೆಮಿಯ ವಿದ್ಯಾರ್ಥಿಗಳಲ್ಲಿ 05 ವಿದ್ಯಾರ್ಥಿಗಳು 600 ಕ್ಕೂ ಹೆಚ್ಚು ಹಾಗೂ 63 ಕ್ಕೂ ಅಧಿಕ ವಿದ್ಯಾರ್ಥಿಗಳು 500 ಕ್ಕೂ ಹೆಚ್ಚು ಅಂಕಗಳನ್ನು ಪಡೆಯುವುದರ ಮೂಲಕ ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಿದ್ದಾರೆ. ಅವರ ಫಲಿತಾಶಂದ ಅನ್ವಯ ಉತ್ತಮ ಕಾಲೇಜುಗಳಲ್ಲಿ ಸೀಟು ಸಿಗುವುದರೊಂದಿಗೆ ಅವರ ಭವಿಷ್ಯವೂ ಉಜ್ವಲವಾಗುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಅದೇ ರೀತಿ ಈ ಫಲಿತಾಂಶವು ಪ್ರಸ್ತುತ ನೀಟ್ ಪರೀಕ್ಷೆ ಬರೆಯಬೇಕು ಎಂದುಕೊಂಡಿರುವ ವಿದ್ಯಾರ್ಥಿಗಳಲ್ಲಿ ಚೈತನ್ಯ ಮೂಡಿಸುವುದರ ಜೊತೆಗೆ ಇನ್ನೂ ಹೆಚ್ಚಿನ ಸಾಧನೆ ಮಾಡುವುದಕ್ಕೆ ಪ್ರೇರಣೆಯಾಗಲಿ ಎಂದು ಹಾರೈಸಿದರು. ಕಾಲೇಜಿನ ಆಡಳಿತ ಮಂಡಳಿಯ ಸರ್ವ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಮಂಜುನಾಥ ಮ. ಜುನಗೊಂಡ, ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ ಸೇರಿದಂತೆ ಸರ್ವ ಬೋಧಕ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದರು.

**" ಮೊದಲ ಬಾರಿಗೆ ಬರೆದ ಪರೀಕ್ಷೆಯು ರದ್ದಾದಾಗ ವಿದ್ಯಾರ್ಥಿಗಳಲ್ಲಿ ಆತಂಕ ಮನೆ ಮಾಡಿತ್ತು. ಇಷ್ಟು ಚನ್ನಾಗಿ ಬರೆದ ಪರೀಕ್ಷೆ ರದ್ದಾಯಿತು ಮುಂದೇನಾ ಗುತ್ತದೆಯೋ ಎಂದುಕೊಂಡಿದ್ದರು. ಅನಿವಾರ್ಯತೆಯನ್ನು ಅರಿತು ಕೊಂಡು ಹಗಲು ರಾತ್ರಿ ಓದಿದ ವಿದ್ಯಾರ್ಥಿಗಳು ಕೊನೆಗೂ ತಾವಂದುಕೊಂಡ ಫಲಿತಾಂಶ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ."**



**■ ಬಸವರಾಜ್ ಕೌಲಗಿ**
**ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರ್‌ಮನ್**



---

# ಪಂಚಗ್ಯಾರಂಟಿ ಯೋಜನೆಗಳ ಲಾಭ ಅರ್ಹರಿಗೆ ತಲುಪಲಿ: ಶ್ರೇಣಿಕ್ ಕುಮಾರ್ ಧೋಕಾ

ಯಾದಗಿರಿ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚಗ್ಯಾರಂಟಿ ಯೋಜನೆಗಳ ಸೌಲಭ್ಯಗಳು ನಿಜವಾದ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶ್ರೇಣಿಕ್ ಕುಮಾರ್ ಧೋಕಾ ಸೂಚಿಸಿದರು.




ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಪಂಚಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಂಚಗ್ಯಾರಂಟಿ ಯೋಜನೆಗಳ ಲಾಭ ಅರ್ಹರಿಗೆ ಮಾತ್ರದೊರೆಯಬೇಕು. ಅನರ್ಹರು ಯಾವುದೇ ರೀತಿಯಲ್ಲಿ ಯೋಜನೆಗಳ ದುರುಪಯೋಗಪಡಿಸಿಕೊಳ್ಳದಂತೆ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ನಿರ್ದೇಶನ ನೀಡಿದರು. ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯ ಯೋಜನೆಗಳ ಫಲಾನುಭವಿಗಳಲ್ಲಿ ಮೃತಪಟ್ಟಿರುವವರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ವರದಿ ಸಲ್ಲಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆಹಾರ ಇಲಾಖೆಯ ಅಧಿಕಾರಿಗಳು ಪರಸ್ಪರ ಸಮನ್ವಯದೊಂದಿಗೆ ಮಾಹಿತಿ ವಿನಿಮಯ ಮಾಡಿಕೊಂಡು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆಯ ಲಾಭವನ್ನು ಅನರ್ಹರು ಪಡೆಯದಂತೆ ತಡೆಯಲು ಜೆಸ್ಕಾಂ ವತಿಯಿಂದ ಸರ್ವೆ ಕಾರ್ಯ ನಡೆಯುತ್ತಿದೆ. ಕರ್ನಾಟಕದ ಅರ್ಹ ಫಲಾನುಭವಿಗಳು ಮಾತ್ರ ಯೋಜನೆಯ ಪ್ರಯೋಜನ ಪಡೆಯುವ ಉದ್ದೇಶದಿಂದ ಸಾಮಾಜಿಕ ಹಾಗೂ ಅಧಿಕೃತ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ. ಇದಕ್ಕೆ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.ಸರ್ವೆ ವೇಳೆ ಅಧಿಕಾರಿಗಳಿಗೆ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಆದಾಯ ತೆರಿಗೆ ಗುರುತಿನ ಸಂಖ್ಯೆ ಸೇರಿದಂತೆ ಅಗತ್ಯ ದಾಖಲೆಗಳನ್ನು ನೀಡಿ ಸಹಕ–ರಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

ಮೃತ ಫಲಾನುಭವಿಗಳ ಮರಣ ಪ್ರಮಾಣ ಪತ್ರ, ಬ್ಯಾಂಕ್ ಖಾತೆಗಳ ಮಾಹಿತಿ, ಅನರ್ಹ ಫಲಾನುಭವಿಗಳಿಂದ ಮರುಪಾವತಿ) ಸೇರಿದಂತೆ ಸಮಗ್ರ ಮಾಹಿತಿಯನ್ನು ಅಧಿಕಾರಿಗಳು ಸಲ್ಲಿಸಬೇಕು. ಜೆಸ್ಕಾಂ ಸರ್ವೆ ಕು–ರಿತು ಗ್ರಾಮವಾರು ಡಂಗುರ ಹಾಗೂ ಇತರೆ ಜಾಗೃತಿ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾದ ರಮೇಶ್ ದೊರೆ, ಹಣಮಂತ ಕಾನಳ್ಳಿ, ಬಸವರಾಜ ಬಿಳ್ಹಾರ್, ಹಳ್ಳಪ್ಪ ಹವಾಲ್ದಾರ್, ಸ್ಯಾಮ್ಸನ್ ಮಾಳಿಕೇರಿ, ತಾಲೂಕು ಅಧ್ಯಕ್ಷರಾದ ಬಸವರಾಜಪ್ಪ ಬಾಗಲಿ, ಬೀರಲಿಂಗಪ್ಪ ಬಾದ್ಯಾಪುರ, ಕೃಷ್ಣ ಜಾಧವ್, ಖಾಜಾ ಮೈನುದ್ದೀನ್, ಲಕ್ಷ್ಮೀಕಾಂತ ರೆಡ್ಡಿ ಪಲ್ಲಾ, ಸಮಿತಿ ಸದಸ್ಯರು, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಗೂ ನೋಡಲ್ ಅಧಿಕಾರಿ ವಿಜಯಕುಮಾರ್ ಮಡ್ಡೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

---

# ಮುಂಗಾರು ಕೈಕೊಟ್ಟ ಹಿನ್ನೆಲೆ ಯಾದಗಿರಿ ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಿ:ಉಮೇಶ ಮುದ್ನಾಳ್ ಆಗ್ರಹ

ಯಾದಗಿರಿ:ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಜಿಲ್ಲೆಯ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಯಾದಗಿರಿ ಜಿಲ್ಲೆಯನ್ನು ತಕ್ಷಣವೇ ಬರಪೀಡಿತ ಜಿಲ್ಲೆಯೆಂದು ಘೋಷಿಸಿ ರೈತರಿಗೆ ಪ್ರತಿ ಎಕರೆಗೆ ?50 ಸಾವಿರ ಪರಿಹಾರ ಬಿಡುಗಡೆ ಮಾಡಬೇಕು ಎಂದು ಸಾಮಾಜಿ–ಕ ಹೋರಾಟಗಾರ ಉಮೇಶ ಕೆ. ಮುದ್ನಾಳ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.



ತಾಲೂಕಿನ ದೊಡ್ಡತಾಂಡಾ ಗ್ರಾಮದ ರೈತ ರಾಮು ಅವರ ಜಮೀನಿಗೆ ಭೇಟಿ ನೀಡಿ ಬೆಳೆ ಹಾನಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಕಳೆದ ವರ್ಷ ಅತಿವೃಷ್ಟಿಯಿಂದ ರೈತರು ಸಂಕಷ್ಟ ಅನುಭವಿಸಿದ್ದರು. ಈ ವರ್ಷ ಉತ್ತಮ ಮುಂಗಾರು ನಿರೀಕ್ಷೆಯಲ್ಲಿ ರೈತರು ಸಾಲ ಮಾಡಿ ಬೀಜ, ಗೊಬ್ಬರ ಖರೀದಿಸಿ ಬಿತ್ತನೆ ಮಾಡಿದ್ದರು. ಆರಂಭದಲ್ಲಿ ಬೆಳೆ ಚೆನ್ನಾಗಿ ಬಂದಿದ್ದರೂ, ನಂತರ ಒಂದು ತಿಂಗಳಿಗೂ ಅಧಿಕ ಕಾಲ ಮಳೆಯಾಗದ ಕಾರಣ ಬೆಳೆಗಳು ಒಣಗಿ ನಾಶವಾಗುತ್ತಿವೆ ಎಂದು ಹೇಳಿದರು.

ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮಳೆಯಾಗುತ್ತಿದ್ದರೂ, ಯಾದಗಿರಿ ಜಿಲ್ಲೆಯಲ್ಲಿ ಸಮರ್ಪಕ ಮಳೆಯಾಗದ ಕಾರಣ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೃಷಿ ಸಾಲ, ಟ್ರ್ಯಾಕ್ಟರ್ ಸಾಲ ಹಾಗೂ ಇತರೆ ಹಣಕಾಸು ಸಂಸ್ಥೆಗಳ ಸಾಲ ತೀರಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರೈತರ ಬೆಳೆಗಳಿಗೆ ನ್ಯಾಯಯುತ ಕನಿಷ್ಠ ಬೆಂಬಲ ಬೆಲೆ ಖಾತರಿಪಡಿಸಬೇಕು. ಕೇಂದ್ರ ಸರ್ಕಾರವು ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತಂದು, ರೈತ–ರಿಂದ ಉತ್ಪನ್ನಗಳನ್ನು ಸರ್ಕಾರವೇ ಖರೀದಿಸಿ ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ರಾಜ್ಯಸರ್ಕಾರವುಯಾದಗಿರಿಜಿಲ್ಲೆಯನ್ನುಬರಪೀಡಿತ ಜಿಲ್ಲೆಯೆಂದು ಘೋಷಿಸಿ, ಬೆಳೆ ನಷ್ಟಕ್ಕೆ ಅನುಗುಣವಾಗಿ ಪರಿಹಾರ ನೀಡಬೇಕು. ಜಾನುವಾರುಗಳಿಗೆ ಮೇವು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕೆರೆ, ಕುಂಟೆ ಹಾಗೂ ಕಾಲುವೆಗಳಿಗೆ ನೀರು ಹರಿಸುವ ತುರ್ತು ಕ್ರಮ ಕೈಗೊಳ್ಳಬೇಕು. ಪಂಸೆಯಗಳಿಗೆ ನಿರಂತರ ವಿದ್ಯುತ್ ಪೂರೈಕೆ ನೀಡಬೇಕು, ಸುಟ್ಟ ಟ್ರಾನಸ್‌ಫಾರ್ಮಮಗಳನ್ನು ತ್ವರಿತವಾಗಿ ಬದಲಾಯಿಸಬೇಕು ಹಾಗೂ ಮೋಡ ಬಿತ್ತನೆ ಕಾರ್ಯವನ್ನು ಕೂಡಲೇ ಆರಂಭಿಸಬೇಕು ಎಂದು ಆಗ್ರಹಿಸಿದರು.ಬೀಜ, ಗೊಬ್ಬರ ಹಾಗೂ ಕೃಷಿ ಕಾರ್ಯಗಳಿಗೆ ಮಾಡಿದ ಹೂಡಿಕೆ ಸಂಪೂರ್ಣ ನಷ್ಟವಾಗಿರುವ ಹಿನ್ನೆಲೆಯಲ್ಲಿ ಬಡ ರೈತರ ಖಾತೆಗೆ ಪ್ರತಿ ಎಕರೆಗೆ ?50 ಸಾವಿರ ಪರಿಹಾರವನ್ನು ತಕ್ಷಣ ಬಿಡುಗಡೆ ಮಾಡಿ ಸರ್ಕಾರ ರೈತರ ನೆರವಿಗೆ ನಿಲ್ಲಬೇಕು ಎಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಲ್ಲೇಶಿ, ಪವನ, ಭೀಮಾಶಂಕರ, ಶರಣು, ರಾಮು, ರವಿ, ಬಸವರಾಜ ಹಾಗೂ ಗ್ರಾಮಸ್ಥರು ಮತ್ತು ಮಹಿಳೆಯರು ಉಪಸ್ಥಿತರಿದ್ದರು.

---

# ಒಳಮೀಸಲಾತಿ ರೋಸ್ಟರ್ ಹಂಚಿಕೆ ಅವೈಜ್ಞಾನಿಕ: ಬಂಜಾರ ಸಮಾಜದ ಬೃಹತ್ ಪ್ರತಿಭಟನೆ

ಯಾದಗಿರಿ: ಒಳಮೀಸಲಾತಿ ರೋಸ್ಟರ್ ಬಿಂದುಗಳ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸಗಳನ್ನು ಖಂಡಿಸಿ ಹಾಗೂ ಲಂಬಾಣಿ, ಭೋವಿ, ಕೊರಚ ಮತ್ತು ಕೊರಮ ಸಮುದಾಯಗಳಿಗೆ ಆಗಿರುವ ಅನ್ಯಾಯವನ್ನು ವಿರೋಧಿಸಿ ಗುರುವಾರ ನಗರದ ಸುಭಾಷ್ ವೃತ್ತದಲ್ಲಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘ, ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘ, ವಿದ್ಯಾರ್ಥಿಗಳ ಸಮೂಹ ಹಾಗೂ ವಿವಿಧ ಸಮುದಾಯಗಳ ಮುಖಂಡರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.



ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು, ಪ್ರಸ್ತುತ ಜಾರಿಗೆ ತಂದಿರುವ ಒಳಮೀಸಲಾತಿಯ ರೋಸ್ಟರ್ ಬಿಂದುಗಳ ಹಂಚಿಕೆ ಅವೈಜ್ಞಾನಿಕವಾಗಿದ್ದು, ಇದರಿಂದ ಲಂಬಾಣಿ, ಭೋವಿ, ಕೊರಚ ಹಾಗೂ ಕೊರಮ ಸಮುದಾಯಗಳಿಗೆ ತೀವ್ರ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ವಿವಿಧ ಸರ್ಕಾರಿ ಇಲಾಖೆಗಳ ಗ್ರೂಪ್–ಸಿ ಹುದ್ದೆಗಳ ನೇಮಕಾತಿ ಆದೇಶಗಳು ಹೊರಬಿದ್ದಿದ್ದರೂ, ರೋಸ್ಟರ್ ಲೋಪದೋಷಗಳಿಂದಾಗಿ ಈ ಸಮುದಾಯಗಳಿಗೆ ಸಿಗಬೇಕಾದ ನ್ಯಾಯಸಮ್ಮತ ಹುದ್ದೆಗಳು ದೊರೆಯುತ್ತಿಲ್ಲ. ಅಲ್ಲದೆ ಶಾಲೆ–ಕಾಲೇಜುಗಳ ಪ್ರವೇಶಾತಿಯಲ್ಲಿಯೂ ವಿದ್ಯಾರ್ಥಿಗಳಿಗೆ ತಾರತಮ್ಯವಾಗುತ್ತಿದ್ದು, ಉನ್ನತ ಶಿಕ್ಷಣದ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಸ್ತುತ ಜಾರಿಯಲ್ಲಿರುವ ಅವೈಜ್ಞಾನಿಕ ರೋಸ್ಟರ್ ವ್ಯವಸ್ಥೆಯನ್ನು ಕೂಡಲೇ ಕೈಬಿಟ್ಟು, ವೈಜ್ಞಾನಿಕ ಹಾಗೂ ನ್ಯಾಯಸಮ್ಮತವಾದ ಹೊಸ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರಬೇಕು. ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಾಗೂ ಉದ್ಯೋಗಾವಕಾಶಗಳನ್ನು ಖಾತರಿಪಡಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಕೂಡಲೇ ಬೇಡಿಕೆಗಳನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಅನ್ಯಾಯಕ್ಕೆ ಒಳಗಾದ ಸಮುದಾಯಗಳು ಒಗ್ಗೂಡಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಳಿಕ ಸಮಾಜದ ಮುಖಂಡರು ಅಪರ ಜಿಲ್ಲಾಧಿಕಾರಿ ರಮೇಶ್ ಕೋಲಾರ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

# ಪ್ರಭುಲಿಂಗಲೀಲೆಯ ಶರಣಾರ್ಥಿ ಸ್ತುತಿ




ಕಲಬುರಗಿ:ಸತ್ತವರ ಕಥೆಯಲ್ಲ, ಜನನದ ಕುತ್ತದಲಿ ಕುದಿಕುದಿದು, ಕರ್ಮದ ಕತ್ತಲೆಗೆ ಸಿಲುಕುವರು ಸೀಮೆಯ ಹೊಲಬು ತಾನಲ್ಲ, ಹೊತ್ತು ಹೋಗದೇ ಪುಂಡರಾಲಿಪ ಮತ್ತಮತಿಗಳ ಗೋಷ್ಠಿಯಲ್ಲ, ಸತ್ಯವಂತರು ನೀವು.–ವಿಜಯನಗರ ಸಾಮ್ರಾಜ್ಯದ ಕಾಲ ಬಹಳ ವೈಭವದ ಮತ್ತು ಅದ್ಭುತವಾದ ಕಾಲ. ಪ್ರೌಢದೇವರಾಯ ಶರಣ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದರು. ಸರ್ವ ಮತಗಳಿಗೆ ಸಮಾನ ಗೌರವ ಕೊಡುವ ಗುಣ ಶರಣ ಸಾಹಿತ್ಯದ ಪ್ರಭಾವದಿಂದಲೇ ಅವರಿಗೆ ಬಂದಿತ್ತು. ಅಂತೆಯೇ ಅದೃಶ್ಯಕವಿ ಅವರ ಬಗ್ಗೆ ಕಾವ್ಯ ರಚನೆ ಮಾಡಿದ್ದಾನೆ ಎಂದು ಮುದಗಲ್ ಕಲ್ಯಾಣಾಶ್ರಮದ ಮಹಾಂತ ಸ್ವಾಮಿಗಳು ಹೇಳಿದರು.

ಜಯನಗರದ ಬಸವ ಸಮಿತಿ ಅನುಭವ ಮಂಟಪದಲ್ಲಿ ಆಯೋಜಿಸಿರುವ ವಚನ ಆಷಾಢದಲ್ಲಿ ಪ್ರವಚನ ನೀಡಿದ ಅವರು, ಇದೇ 14ನೇ ಶತಮಾನದ ಕಾಲಘಟ್ಟದಲ್ಲಿ 25 ಗತಿಗಳ 1011 ನುಡಿಗಳ ಪ್ರಭುಲಿಂಗ ಲೀಲೆ ಎಂಬ ಮೇರು ಕಾವ್ಯವನ್ನು ರಚಿಸುತ್ತಾರೆ. ಆದರೆ ಎಲ್ಲಿಯೂ ಕೂಡ ಅವರು ತಮ್ಮ ವ್ಯಕ್ತಿಗತ ಪರಿಚಯದ ಉಲ್ಲೇಖ ಮಾಡಿಲ್ಲ. ಶರಣರ ಅನುಭಾವ, ವಿರಾಗಿ ಜೀವನವನ್ನು ಅಧ್ಯಯನ ಮಾಡಿ ಆ ತತ್ವವನ್ನು ಅನುಭಾವಕ್ಕೆ ತಂದು ಬರೆದ ಕೃತಿಯಾಗಿದೆ. ಆರಂಭದಲ್ಲಿ ಶರಣಾರ್ಥಿ ಸ್ತುತಿಯಿದ್ದು, 'ಕಾಯದೊಳು ಗುರು ಲಿಂಗ ಜಂಗಮದಾಯತ' ಎಂದು ಬಸವಣ್ಣನವರ ವಚನವನ್ನು ಪ್ರಸ್ತಾಪಿಸಿ ಶರಣರು ಅಪಾಯದ ಕೆಲಸ ತಪ್ಪಿಸಲು ಉಪಾಯದ ಮಾತುಗಳನ್ನು ಹೇಳಿದ್ದರು ಎಂದು ಬಸವಣ್ಣನವರನ್ನು ಸ್ತುತಿಮಾಡುವ ಕವಿ ಸರ್ವಜನಾಂಗಕ್ಕೂ ಅರಿವಿನ ಬೆಳಕು ಕಲ್ಪಿಸಿದ ಶರಣರು ಸಮಾಜದಲ್ಲಿ ಇಂದಿಗೂ ಕಾಣ ಬರುವ ವಿಚಿತ್ರ ವ್ಯವಸ್ಥೆ

ದೂರ ಮಾಡಿದರು ಎಂದು ಬಸವಣ್ಣನವರ ಸ್ತುತಿ ಮಾಡುತ್ತಾರೆ. ಆಯತ, ಸ್ವಾಯತ, ಸನ್ನಿಹಿತ ನಮ್ಮಲ್ಲಿ ಇವೆ. ಚಾಮರಸರ ಕಾವ್ಯಕ್ಕೆ ಅಲ್ಲಮರೇ ಪ್ರೇರಣೆ. ಪ್ರಭಾವ. ಆಯಿತ್ತು ಬಸವಾ ನಿನ್ನಿಂದ ಗುರುಸ್ವಾಯತವೆನಗೆ. ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವೆನಗೆ. ಆಯಿತ್ತು ಬಸವಾ ನಿನ್ನಿಂದ ಜಂಗಮಸ್ವಾಯತವೆನಗೆ. ಆಯಿತ್ತು ಬಸವಾ ನಿನ್ನಿಂದ ಪ್ರಸಾದಸ್ವಾಯತವೆನಗೆ ಎಂದು ಹೇಳುವ ಅಲ್ಲಮಪ್ರಭುಗಳು ಬಸವಣ್ಣನೇ ಲಿಂಗಾಯತ ಧರ್ಮದ ಮೂಲ ಪುರುಷ. ಇಷ್ಟಲಿಂಗದ ಜನಕ. ಇಷ್ಟಲಿಂಗದ ವಿಳಾಸ ಬಸವಣ್ಣ. ಕಾಯ ಪಾವನ ಮಾಡಿದ ಪೂರ್ವಾಚಾರಿ ಸಂಗನಬಸವ ಎಂದು ಕೊಂಡಾಡುತ್ತಾರೆ. ಆರೇಳು ನುಡಿಯ ಮಂಗಳಾಚರಣೆಯ ಸ್ತುತಿಗೀತೆಗಳಲ್ಲಿ ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ, ಮರುಳ ಶಂಕರದೇವ, ಕಿನ್ನರಿ ಬೊಮ್ಮಯ್ಯ ಮುಂತಾದ ಶಿವಶರಣರಿಗೆ ಶರಣಾರ್ಥಿ ಸಲ್ಲಿಸುತ್ತಾರೆ. ಇವೆಲ್ಲವೂ ಕೃತಿಯ ಪೀಠಿಕೆ ಇದ್ದ ಹಾಗೆ ಎಂದು ಹೇಳಿದರು.

ಬಸವ ಸಮಿತಿ ಅಧ್ಯಕ್ಷೆ ಡಾ.ವಿಲಾಸವತಿ ಖೂಬಾ ಸೇ–ರಿದಂತೆ ಮತ್ತಿತರರು ಇದ್ದರು.

# ಶಿವಪ್ರಸಾದ ಎಸ್.ಬನ್ನಟ್ಟಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ



ಕಲಬುರಗಿ:ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ಅಡಿಯಲ್ಲಿ ಸೇಡಂನ ಯುವ ಚಿತ್ರಕಲಾವಿದ ಶಿವಪ್ರಸಾದ ಎಸ್. ಬನ್ನಟ್ಟಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಜು.18 ರಿಂದ 22 ರವರೆಗೆ ನಗರದ ರಾಮ ಮಂದಿರ ಹಿಂದುಗಡೆ ಇರುವ ಬಿಸಿಲು ಆರ್ಟ್ ಗ್ಯಾಲರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಚಿತ್ರಕಲಾ ಪ್ರದರ್ಶನವನ್ನು ದಿನಾಂಕ 18–07–2026 ರಂದು ಸಂಜೆ 5:00 ಗಂಟೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾದ ಬಸವರಾಜ ಎಲ್. ಜಾನೆ ಅವರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಕಲಬುರಗಿ ಜಿಲ್ಲಾ ಜೆಡಿಎಸ್ ಅಧ್ಯಕ್ಷರಾದ ಬಾಲರಾಜ್ ಗುತ್ತೇದಾರ್, ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ಜಗದೀಶ್ವರಿ ಅ.ನಾಸಿ ಮತ್ತು ದೃಶ್ಯ ಬೆಳಕು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾದ ಡಾ. ಪರಶುರಾಮ ಪಿ. ಅವರು ಪಾಲ್ಗೊಳ್ಳಲಿದ್ದಾರೆ.

ಶಿವಪ್ರಸಾದ ಅವರು ವಿವಿಧ ಮಾಧ್ಯಮದಲ್ಲಿ ರಚಿಸಿದ ಸುಮಾರು 15ಕ್ಕೂ ಹೆಚ್ಚು ಚಿತ್ರ ಕಲಾಕೃತಿಗಳು ಪ್ರದರ್ಶನಗೊಳ್ಳಲಿವೆ, ಶಿವಪ್ರಸಾದ ಅವರು ಪ್ರದರ್ಶಿಸುತ್ತಿರುವ ಚಿತ್ರಕಲಾ ಕೃತಿಗಳಲ್ಲಿ ಯುವ ಮನಸ್ಸುಗಳ ಆಲೋಚನೆ, ಪ್ರಸ್ತುತ ಸಂದರ್ಭದಲ್ಲಿ ಸಮಾಜದಲ್ಲಿ ಜರುಗುತ್ತಿರುವ ಘಟನೆಗಳು ಹೀಗೆ ಹಲವಾರು ವಸ್ತು–ವಿಷಯಗಳು ಒಳಗೊಂಡಿದೆ.

ಹೈದರಾಬಾದ್, ಸೋಲಾಪುರ್, ಬೆಂಗಳೂರು, ಗದಗ, ರಾಮನಗರ, ಕಲಬುರಗಿ ಸೇರಿದಂತೆ 10ಕ್ಕೂ ಹೆಚ್ಚು ಚಿತ್ರ–ಶಿಲ್ಪಕಲಾ ಶಿಬಿರ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ದೃಶ್ಯ ಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶಿವಪ್ರಸಾದ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ, ಬಾಂಬೆ ಆರ್ಟ್ ಸೊಸೈಟಿಯ ಪ್ರಶಸ್ತಿ, ಪುಣೆಯ ಲೋಕಮಾನ ತಿಲಕ ಪ್ರಶಸ್ತಿ, ಪ್ರಫುಲ್ಲಾಧಹನುಕರ್ ಪ್ರಶಸ್ತಿ, ದೃಶ್ಯ ಬೆಳಕು ಪ್ರಶಸ್ತಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ

# ಸಂಸದ ರಾಧಾಕೃಷ್ಣ ದೊಡ್ಡಮನಿ ಅವರಿಂದ ಪ್ರಗತಿ ಪರಿಶೀಲನೆ



ಕಲಬುರಗಿ;ಲೋಕಸಭಾ ಸದಸ್ಯರಾದ ರಾಧಾಕೃಷ್ಣ ದೊಡ್ಡಮನಿ ಅವರು ಇತ್ತೀಚಿಗೆ ಕಲಬುರಗಿಯ ತಮ್ಮ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ಪ್ರಸ್ತಾಪಿಸಿದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದರು. ಜೊತೆಗೆ ಜಿಲ್ಲೆಯಲ್ಲಿ ರಾಜ್ಯ ಹಾಗೂ ಕೇಂದ್ರ ಪುರಸ್ಕತ ಯೋಜನೆಗಳಡಿಯಲ್ಲಿ ಮಂಜೂರಾದ ಇತರ ಅಭಿವೃದ್ಧಿ ಕಾಮಗಾರಿಗಳ ವಸ್ತುಸ್ಥಿತಿ ಬಗ್ಗೆ ಮಾಹಿತಿಯನ್ನು ಪಡೆದು, ಯಾವುದೇ ರೀತಿಯ ವಿಳಂಬಕ್ಕೆ ಆಸ್ಪದ ನೀಡದೇ ಸದರಿ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ಸದರಿ ಸಭೆಯಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಷರೀಫ್ ಹಾಗೂ ಸಿಇಓ ರಾಹುಲ್ ಸಂಕನೂರು ಸೇರಿದಂತೆ ಮತ್ತಿತರ ಅಧಿಕಾರಿಗಳು ಭಾಗವಹಿಸಿದ್ದರು.

ಮುಂದುವರೆದು ಸಂಸದರು ಕಲಬುರಗಿ ವಿಮಾನ ನಿಲ್ದಾಣದಲ್ಲಿ ವಿಮಾನ ನಿಲ್ದಾಣ ಸಲಹಾ ಸಮಿತಿಯ ಸದಸ್ಯರ ಹಾಗೂ ಅಧಿಕಾರಿಗಳ ಸಭೆ ನಡೆಸಿದರು. ಜಿಲ್ಲೆಯ ಪ್ರಯಾಣೀಕರ ಸುಗಮ ಪ್ರಯಾಣಕ್ಕೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ಅವಶ್ಯಕ ಕಾಮಗಾರಿಗಳ ಪಟ್ಟಿ ಮಾಡಿಕೊಡಲು ಸೂಚಿಸಿ, ಶೀಘ್ರದಲ್ಲಿ ಸಂಭಂದಪಟ್ಟ ಇಲಾಖೆಯಿಂದ ಕೆಲಸಗಳನ್ನು ತ್ವರಿತಗತಿ ನೆರವೇರಿಸಿಕೊಡುವ ನಿರ್ಣಯ ಕೈಗೊಂಡರು. ನಂತರ, ನಗರದಲ್ಲಿ ಪ್ರಗತಿಯಲ್ಲಿರುವ ಹಲವಾರು ಅಭಿವೃದ್ಧಿ ಕಾಮಗಾರಿಗಳ ಸ್ಥಳ ತನಿಖೆಯನ್ನು ಕೈಗೊಂಡು ಖುದ್ದಾಗಿ ಪರಿಶೀಲನೆ ನಡೆಸಿದರು.ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಷರೀಫ್ ಹಾಗೂ ಸಿಇಓ ರಾಹುಲ್ ಸಂಕನೂರು ಮತ್ತು ನಗರ ಪೊಲೀಸ್ ಕಮೀಷನರ್ ಡಾ. ಶರಣಪ್ಪ ಸೇರಿದಂತೆ ಹಲವಾರು ಅಧಿಕಾರಿಗಳು ಇದ್ದರು.

# 19 ರಂದು ರಾಜ್ಯಮಟ್ಟದ ಸಮಾಜ ಸಮ್ಮೇಳನ




ಕಲಬುರಗಿ: ಇತಿಹಾಸದಲ್ಲಿ ಮೊದಲ ಬಾರಿಗೆ ಶ್ರೀ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಸಮಾಜ,ಸಾವಜಿ ಸಮಾಜ) ಕರ್ನಾಟಕ ರಾಜ್ಯ ಮಟ್ಟದ ಪದಾಧಿಕಾರಿಗಳ (ಕೋರ್ ಕಮಿಟಿ) ಮತ್ತು ಸಮಾಜ ವಲಯ ಸಭೆಯ ಐತಿಹಾಸಿಕ ಸಮ್ಮೇಳನವನ್ನು ಜುಲೈ 19 ರಂದು ಕಲಬುರಗಿ ನಗರದ ಶಹಾಬಜಾರ,ಜಗದಂಬಾ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಕಲಬುರಗಿ ' ಸಮಾಜದ ಅಧ್ಯಕ್ಷರಾದ ಶ್ರೀರಾಮ್ ಡಿ. ಪವಾರ್ ಅವರು ತಿಳಿಸಿದರು ನಗರದ ಪತ್ರಿಕಾಭವನದಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ ಬೀದರ್, ಕಲಬುರಗಿ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಒಳಗೊಂಡಂತೆ 5 ಜಿಲ್ಲೆಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.ಈ ಸಮ್ಮೇಳನದಲ್ಲಿ ಮಹಿಳಾ ಮಂಡಳ, ಯುವಕ ಮಂಡಲ ಮತ್ತು ಪೊಷಕರ ಮಂಡಳಿಯನ್ನು ಒಳಗೊಂಡ ಒಟ್ಟು 350–400 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಮುದಾಯದಲ್ಲಿ ಏಕತೆಯನ್ನು ತರುವುದು, ಸಮುದಾಯವನ್ನು ಅಭಿವೃದ್ಧಿಪಡಿಸುವುದು ಮತ್ತು

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಬದಲಾವಣೆಯನ್ನು ತರುವುದು ಈ ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ.ಸಮ್ಮೇಳನವನ್ನು 2 ಅಧಿವೇಶನಗಳಲ್ಲಿ ಆಯೋಜಿಸಲಾಗಿದೆ. ಮೊದಲ ಅಧಿವೇಶನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಆರಂಭವಾಗುತ್ತದೆ. ಸಭೆಯಲ್ಲಿ ಸಮಾಜದ ಅಭಿವೃದ್ಧಿಯ ಕುರಿತು ಚರ್ಚೆ ನಡೆಯಲಿದೆ.ಎರಡನೇ ಅಧಿವೇಶನ ಸಂಜೆ 5 ರಿಂದ 7 ಸಂಜೆ ರವರೆಗೆ ನಡೆಯಲಿದ್ದು ಸಮುದಾಯದ ಕಲ್ಯಾಣಕ್ಕಾಗಿ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಕೋರ್ ಸಮಿತಿ ಸಭೆ ನಡೆಯಲಿದೆ ಇದಲ್ಲದೆ ಮಾದಕ ವಿರೋಧಿ ಆಂದೋಲನ, ಸಮುದಾಯದಲ್ಲಿ ಶಿಕ್ಷಣ ಇತ್ಯಾದಿ ವಿಶೇಷ ಅಧಿವೇಶನಗಳು ಆಯೋಜಿಸಲಾಗಿದೆ. ನಮ್ಮ ಸಮುದಾಯದ ಆರ್ಥಿಕ ಹಿಂದುಳಿದ ಸ್ಥಿತಿಯನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ' ಸಮಾಜವು ಬಡವರು ಮತ್ತು ನಿರ್ಗತಿಕ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಲಾಗುವುದು. ಇ–ಸೇವಾ ಯೋಜನೆ ಅಡಿಯಲ್ಲಿ ಕಂಪ್ಯೂಟರ ಯಂತ್ರವನ್ನು ಸಮಾಜ–ಕ್ಕೆ ಕೊಡಲಾಗುವುದು.ಈ ಕಾರ್ಯಕ್ರಮದಲ್ಲಿ ಹಲವಾರು ಗಣ್ಯ ವ್ಯಕ್ತಿಗಳು ಭಾಗವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಎಸ್.ಎಸ್.ಕೆ. ಸಮಾಜದ ಗೌರವ ಅಧ್ಯಕ್ಷ ಮತ್ತು ರಾಜ್ಯ ಸಭಾ ಸದಸ್ಯರಾದ ನಾರಾಯಣಸಾ ಭಾಂಡಗೆ,ಕರ್ನಾಟಕ ರಾಜ್ಯ, ಎಸ್.ಎಸ್.ಕೆ. ಸಮಾಜ ಅಧ್ಯಕ್ಷ ಡಾ. ಶಶಿಕುಮಾರ ಮೆಹರವಾಡಿ, ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಕಬಾಡಿ, ಹುಬ್ಬಳ್ಳಿ ಮಾಜಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಎಸ್.ಎಸ್.ಕೆ. ಸಮಾಜದ ಮಾಜಿ ಅಧ್ಯಕ್ಷ ಅಶೋಕ ಕಾಟವೆ ಹಾಗೂ ಕರ್ನಾಟಕ ರಾಜ್ಯ ಎಸ್.ಎಸ್.ಕೆ. ಸಮಾಜದ ಎಲ್ಲ ಪದಾಧಿಕಾರಿಗಳು ಕಾರ್ಯಕಾರಿಣಿ ಸದಸ್ಯರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ' ಸಮಾಜದ ಉಪಾಧ್ಯಕ್ಷ ಡಾ. ಯಶವಂತ್ ರಾವ್ ಮೆಂಗಜಿ, ಕಾರ್ಯದರ್ಶಿ ವಿಷ್ಣು ಸಾ ಬಾರಾಡ, ಜಂಟಿ ಕಾರ್ಯದರ್ಶಿ ರಮಾಕಾಂತ್ ಚವ್ಹಾಣ, ಖಜಾಂಚಿ ನಾಗೇಶ್ ಚೂಡಾಮಣಿ ಮತ್ತು ಕರ್ನಾಟಕ ರಾಜ್ಯ ಎಸ್ ಎಸ್ ಕೆ ಸಮಾಜದ ಉಪಾಧ್ಯಕ್ಷರಾದ ಮಾರುತಿರಾವ ಪವಾರ ಹಾಗೂ ಜಂಟಿ ಕಾರ್ಯದರ್ಶಿ ಸಂಜಯ್ ಮಿಸ್ಕಿನ್ ಅವರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಳೆಗಾಗಿ ರೈತರ ಪಾದಯಾತ್ರೆ



ಚಿಂಚೋಳಿ : ತಾಲೂಕಿನ ಕಲ್ಲೂರ್ ರೋಡ್ ಗ್ರಾಮದಲ್ಲಿ ರೈತರು ಹಾಗೂ ಭಜನೆ ಮಂಡಲ ಸದಸ್ಯರ ವತಿಯಿಂದ ಮಳೆ ಬಾರದ ಕಾರಣ ಕಲ್ಲೂರ್ ಮತ್ತು ಸಂಗಮ್ ಕಲನ ಹಾಗೂ ಮಲ್ಕಾಪುರ್ ಮತ್ತು ಕೊತ್ಲಾಪುರ್ ಹಾಗೂ ಮಿರಿಯಾಣ ಗ್ರಾಮಗಳಲ್ಲಿರುವ ಶ್ರೀ ಆಂಜನೇಯ ದೇವ–ರಿಗೆ ವಿಶೇಷ ಪೂಜಾ ಅಭಿಷೇಕ ಮಾಡಲು ಕಲ್ಲೂರದಿಂದ ಭಜನೆ ಮುಖಾಂತರ ಪಾದಯಾತ್ರೆ ಮಾಡಿದರು.

ಆಂಜನೇಯ ದೇವ–ರಿಗೆ ಆದಷ್ಟು ಬೇಗನೆ ಮಳೆ ಬರಬೇಕೆಂದು ರೈತರು ದೇವರಲ್ಲಿ ಬೇಡಿಕೊಂಡರು. ಈ ಸಂದರ್ಭದಲ್ಲಿ ಕಲ್ಲೂರ್ ರೋಡ್ ಗ್ರಾಮದ ರೈತರಾದ ಅಂಜಪ್ಪ ಪೂಜಾರಿ, ಚಂದ್ರು ಗೋಣಿ, ವೈಜನಾಥ್ ಹೂಗಾರ, ಗುರುನಾಥ್ ಮುಕ್ಕ, ಶಿವಕುಮಾರ ಕಂಟ್ಲಿ, ದತ್ತು, ಭರತ, ಹನುಮಂತ, ಹಾಜಪ್ಪ, ಗೋಪಾಲ, ಪ್ರವೀಣ, ರಮೇಶ್, ಕಂತಪ್ಪ, ಜಗನ್ನಾಥ್ ನಾಟೀಕರ, ಅಂಬೋಜಿ, ಜಗನ್ನಾಥ, ರಮೇಶ್ ಮುಕ್ಕ, ರಾಜು ಮುಕ್ಕ, ಇದ್ದರು



# ಶಿವರಾಂಪುರ ಬಸಸ್ಟ್ಯಾಂಡ್ ಸ್ವಚ್ಚಗೊಳಿಸಲು ಆಗ್ರಹ

ಚಿಂಚೋಳಿ: ತಾಲೂಕಿನ ಕುಂಚಾವರಾಮ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಿವರಾಂಪುರ ಗ್ರಾಮದ ಬಸ್ ಸ್ಟ್ಯಾಂಡ್ ಸ್ವಚ್ಚಗೊಳಿಸಲು ನಮ್ಮ ಕರ್ನಾಟಕ ಸೇನೆ ಆಗ್ರಹಿಸಿದೆ. ಸಂಪೂರ್ಣ ಗಿಡ ಗಂಟೆಯಿಂದ ಮತ್ತು ಇನ್ನಿತರ ವಸ್ತುಗಳಿಂದ ಸಾರ್ವಜನಿಕರು ಬಸ್ಟಾಂಡ ನಲ್ಲಿ ಕೂಡಬೇಕಾದರೆ ಗಿಡಗಂಟೆಯಿಂದ ಬಸ್ಟಾಂಡ್ ಸಂಪೂರ್ಣ ಹಾಳಾಗಿದೆ. ಇದು ನೋಡಿದರೆ ಸಾರಿಗೆ ಇಲಾಖೆ ಮತ್ತು ಗ್ರಾಮ ಪಂಚಾಯತ ಅಧಿಕಾರಿಗಳ ನಿರ್ಲಕ್ಷತೆ ಎದ್ದು ಕಾಣುತ್ತಿದೆ.ಶಿವರಾಂಪುರ ಕರ್ನಾಟಕದ ಗಡಿ ಭಾಗವಾದ ಗ್ರಾಮವಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಬಸ್ ಸ್ಟಾಂಡ್ ಅನ್ನು ಸ್ವಚ್ಚಗೊಳಿಸಬೇಕೆಂದು ನಮ್ಮ ಕರ್ನಾಟಕ ಸೇನೆಯ ತಾಲೂಕ ಅಧ್ಯಕ್ಷ ಪ್ರಭಾಕರ್ ಗೌಡ್ ಆಗ್ರಹಿಸಿದ್ದಾರೆ.



# ಪೊಲೀಸ್ ದಾಳಿ: 13 ಕ್ಯಾನ್ ನಕಲಿ ಹೈಡ್ರೋಲಿಕ್ ಆಯಿಲ್ ವಶ

ಕಲಬುರಗಿ: ಎಸ್‌ಪಿ ಕಂಪನಿಯ ಲೇಬಲ್ ಹಚ್ಚಿ ಹೈಡ್ರೋಲಿಕ್ ಆಯಿಲ್ ಮಾರುತ್ತಿದ್ದ ಅಂಗಡಿಯ ಮೇಲೆ ದಾಳಿ ನಡೆಸಿದ ರೋಜಾ ಠಾಣೆ ಪೊಲೀಸರು 13 ಕ್ಯಾನ್ ನಕಲಿ ಆಯಿಲ್ ಜಪ್ತಿ ಮಾಡಿದ್ದಾರೆ.

ಹುಮನಾಬಾದ್ ರಿಂಗ್ ರಸ್ತೆಯಲ್ಲಿರುವ ಜಹೀರ್ ಅಬ್ಬಾಸ್ ಇಕ್ಬಾಲ್ ಹುಸೇನ್ ಎಂಬುವವ–ರಿಗೆ ಸೇರಿದ ಅಂಗಡಿಯ ಮೇಲೆ ದಾಳಿ ನಡೆಸಿದ ಪೊಲೀಸರು ಸುಮಾರು 60 ಸಾವಿರ ರೂ ಮೌಲ್ಯದ 13 ಕ್ಯಾನ್ ವಶಪಡಿಸಿಕೊಂಡಿದ್ದಾರೆ.

ಈ ಕುರಿತು ಎಸ್‌ಪಿ ಕಂಪನಿ ಮ್ಯಾನೇಜರ್ ಫಾರೆನ್ಸಿಸ್ ಪಾಲ್ ಎಂಬುವವರು ದೂರು ನೀಡಿದ್ದರು.

ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್ ಡಿ, ಡಿಸಿಪಿ ಶಾಲೂ ಅವರ ಮಾರ್ಗದರ್ಶನದಲ್ಲಿ ರೋಜಾ ಠಾಣೆ ಪಿಐ ದಿಲೀಪ ಸಾಗರ್ ನೇತೃತ್ವದಲ್ಲಿ ಸಿಬ್ಬಂದಿಗಳಾದ ಲಕ್ಷ್ಮೀ,ಅಂಬರೀಶ, ಸಿಕಂದರ್ ಖಾನ್, ಸಿರಾಜ್ ಅವರು ದಾಳಿ ನಡೆಸಿದ್ದರು.

# ನ್ಯಾಯಶಾಸ್ತ್ರಕ್ಕೆ ವಿಜ್ಞಾನೇಶ್ವರರ ಕೊಡುಗೆ ಉಪನ್ಯಾಸ ನಾಳೆ



ಕಲಬುರಗಿ: ನಗರದ ಅಡ್ವೋಕೇಟ್ ಕಾಲನಿಯ ನೂತನ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ನಾಳೆ ( ಜುಲೈ 18) ಸಂಜೆ 6.30 ಗಂಟೆಗೆ, ಕಲಬುರಗಿಯ ಹಿರಿಯ ಪತ್ರಕರ್ತ, ಸಾಹಿತಿ, ಅಂಕಣ–ಕಾರ ಡಾ. ಶ್ರೀನಿವಾಸ ಸಿರನೂರಕರ್ ಅವರಿಂದ ಭಾರತೀಯ ನ್ಯಾಯಶಾಸ್ತ್ರಕ್ಕೆ ವಿಜ್ಞಾನೇಶ್ವರರ ಕೊಡುಗೆ ಈ ವಿಷಯ ಕುರಿತ ಉಪನ್ಯಾಸ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದ ಪ್ರಯೋಜನವನ್ನು ಕಲಬುರಗಿ ನಿವಾಸಿಗಳು ಪಡೆದುಕೊಳ್ಳಬೇಕೆಂದು ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್" ನ ಅಧ್ಯಕ್ಷ ಮಂಜುನಾಥ ಜೇವರ್ಗಿ, ಕಾರ್ಯದರ್ಶಿ ಹಾಗೂ ಸಮಿತಿಯ ಸದಸ್ಯರು ಮನವಿ ಮಾಡಿದ್ದಾರೆ




**ಕಲಬುರಗಿ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಹಾಗೂ ಹೋರಾಟಗಾರ ಸೋನಂ ವಾಂಗ್ಚುಕ್ ಹಾಗೂ ಉಪವಾಸ ನಿರತ ವಿದ್ಯಾರ್ಥಿ ಸಂಘಟನೆಯೊಂದಿಗೆ ಮಾತುಕತೆ ನಡೆಸಬೇಕು ಎಂದು ಆಗ್ರಹಿಸಿ ಇಂದು ಡಿವೈಎಸ್‌ಐ ಮತ್ತು ಎಸ್ಎಸ್‌ಐ ಸಂಘಟನೆಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಇಮಾಮ್ ಸಾಬ್,ನಾಗರಾಜ,ಅಜಯ,ಅಂಕಿತಾ,ಪ್ರೇಮ್,ಅನಿತಾ,ತಾಯಣ್ಣ ಸೇರಿದಂತೆ ಹಲವರು ಪಾಲ್ಗೊಂಡರು**

# ರೌಡಿ ಶೀಟರ್ ಚೇತನ ಹೈಬತ್ತಿ ಗುಂಡಾ ಕಾಯ್ದೆಯಡಿ ಬಂಧನ



ಕಲಬುರಗಿ:ನಗರದ ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿ ಶೀಟರ್ ಚೇತನ ತಂದೆ ಚಂದ್ರಕಾಂತ ಹೈಬತ್ತಿ (31) ಎಂಬಾತನನ್ನು ಕರ್ನಾಟಕ ಅಪಾಯಕಾರಿ ಚಟುವಟಿಕೆಗಳ ನಿಯಂತ್ರಣ ಕಾಯ್ದೆ

(ಗುಂಡಾ ಕಾಯ್ದೆ) ಅಡಿ ಬಂಧಿಸಿ ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿಡಲು ಕಲಬುರಗಿ ನಗರ ಪೊಲೀಸ್ ಆಯುಕ್ತರು ಆದೇಶಿಸಿದ್ದಾರೆ.

ಕಲಬುರಗಿ ನಗರದ ವಿದ್ಯಾನಗರ, ಎಸ್.ಬಿ. ಕಾಲೇಜು ರಸ್ತೆ ನಿವಾಸಿಯಾಗಿರುವ ಚೇತನ ಹೈಬತ್ತಿ ವಿರುದ್ಧ ಕಲಬುರಗಿ ಸೇರಿದಂತೆ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ಒಟ್ಟು 17 ಪ್ರಕರಣಗಳು ದಾಖಲಾಗಿವೆ. 2016ರಿಂದ 2026ರವರೆಗೆ ಭಾರತೀಯ ದಂಡ ಸಂಹಿತೆ, ಭಾರತೀಯ ನ್ಯಾಯ ಸಂಹಿತೆ–2023, ಸಿಆರ್‌ಪಿಸಿ ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ವಿವಿಧ ಕಲಂಗಳಡಿ ಪ್ರಕರಣಗಳನ್ನು ಎದುರಿಸುತ್ತಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರ ಮಾಹಿತಿ ಪ್ರಕಾರ, ಚೇತನ ಹೈಬತ್ತಿಯನ್ನು 'ಎ' ವರ್ಗದ ರೌಡಿ ಎಂದು ಗುರುತಿಸಲಾಗಿದ್ದು, ಆತನ ರೌಡಿ ಶೀಟ್ ಚಾಲ್ತಿಯಲ್ಲಿದೆ. ಕೊಲೆ, ಕೊಲೆಗೆ ಯತ್ನ, ದರೋಡೆ, ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಗಲಾಟೆ, ಮಾರಕಾಸ್ತ್ರಗಳಿಂದ ಹಲ್ಲೆ ಸೇ–ರಿದಂತೆ ಹಲವು ಗಂಭೀರ ಅಪರಾಧ ಪ್ರಕರಣಗಳಲ್ಲಿ ಆತ ಭಾಗಿಯಾಗಿದ್ದಾನೆ ಎಂದು ತಿಳಿಎಂದು ತಿಳಿಸಲಾಗಿದೆ.

ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸುವುದು, ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವುದು, ಮುಚ್ಚಳಿಕೆ ಷರತ್ತು ಉಲ್ಲಂಘಿಸುವುದು ಹಾಗೂ ತುಮಕೂರು ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜಾರಿಯಲ್ಲಿದ್ದ ಗಡಿಪಾರು ಆದೇಶವನ್ನು ಉಲ್ಲಂಘಿ–ಸಿರುವ ಆರೋಪಗಳೂ ಆತನ ವಿರುದ್ಧ ಇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಆತನ ಚಟುವಟಿಕೆಗಳು ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಅಶೋಕ ನಗರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಸತೀಶ ಕಣಿಮೇಶ್ವರ ಅವರು ಸಲ್ಲಿಸಿದ ವರದಿಯ ಆಧಾರದ ಮೇಲೆ, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. (ಐಪಿಎಸ್) ಅವರು ಗುಂಡಾ ಕಾಯ್ದೆಯಡಿ ಬಂಧನಕ್ಕೆ ಆದೇಶ ನೀಡಿದ್ದಾರೆ.

# ಅಶ್ಲೀಲ ವಿಡಿಯೋ ಶೇರ್ ಮಾಡಿದ ಅಪ್ರಾಪ್ತ ಬಾಲಕನ ವಿರುದ್ಧ ಪ್ರಕರಣ

ಕಲಬುರಗಿಅಶ್ಲೀಲ ವಿಡಿಯೋ ಶೇರ್ ಮಾಡುವುದರ ಮೂಲಕಅಪರಾಧಕೃತ್ಯವೆಸಗಿದಅಪ್ರಾಪ್ತಬಾಲಕನವಿರುದ್ಧ ಇಲ್ಲಿನ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಬಾಲಕನೆ ತನ್ನ ಸಾಮಾಜಿಕ ಜಾಲತಾಣ ಖಾತೆಯಲ್ಲಿ 46 ಸೆಕೆಂಡುಗಳು ಅಶ್ಲೀಲ ವಿಡಿಯೋ ಶೇರ್ ಮಾಡಿದ್ದು, ಈ ಸಂಬಂಧ ಆತನ ವಿರುದ್ಧ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ನಡೆದಿದೆ.ಕಾರು ಹಿಂಬಾಗಿಲು ಕಿಟಕಿ ಒಡೆದು ಕಳವು ನಗರದ ರಂಗ ಮಂದಿರ ಹತ್ತಿರವಿರುವ ಹೋಟೆಲ್ ಬಳಿ ಕಾರು ನಿಲ್ಲಿಸಿ ಊಟ ಮಾಡಲು ಹೋದ ವೇಳೆ ಕಾರಿನ ಹಿಂಭಾಗದ ಕಿಟಕಿ ಗ್ಲಾಸ್ ಒಡೆದು 20 ಸಾವಿರ ರೂ. ಮೌಲ್ಯದ ರಿಯಲ್ ಮೀ ಪ್ಯಾಡ್, 2,200 ರೂ.ಮೌಲ್ಯದ ಬ್ಲೂಟೂತ್, 1600 ರೂ.ಮೌಲ್ಯದ ಸ್ಪೀಕರ್, 1500 ರೂ. ಗಳಿದ್ದ ಪರ್ಸ್, ಎಟಿಎಂ ಕಾರ್ಡ್, ಪ್ಯಾನ್ ಕಾರ್ಡ್ ಮತ್ತು 20 ಸಾವಿರ ರೂ.ಮೌಲ್ಯದ ಪವರ್ ಬ್ಯಾಂಕ್ ಕಳವು ಮಾಡಲಾಗಿದೆ ಎಂದು ನಗರದ ಎಸ್.ಬಿ.ಕಾಲೇಜಿನಲ್ಲಿ ಪ್ರೊಫೆಸರ್ ಆಗಿರುವ ಹೀತೇಶಕುಮಾರ ಅವರು ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಇವರು ಗೆಳೆಯನ ಜೊತೆ ಕಾರಿನಲ್ಲಿ ರಂಗ ಮಂದಿರ ಹತ್ತಿರವಿರುವ ಹೋಟೆಲ್‌ಗೆ ಊಟಕ್ಕೆ ಹೋಗಿದ್ದರು. ಊಟ ಮುಗಿಸಿಕೊಂಡು ಮರಳಿ ಬರುವುದರೊಳಗೆ ಕಳ್ಳರು ಈ ಕೃತ್ಯವೆಸಗಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

# ಸುಪ್ರೀತಾ ಆಸ್ಕಿ, ರುಚಿತಾ ಕುಂದರಗಿ ಗೆ ಅತ್ಯುತ್ತಮ ಸಂಶೋಧನಾ ಪ್ರಶಸ್ತಿ




■ ಉದಯರಶ್ಮಿ ದಿನಪತ್ರಿಕೆ

ವಿಯಯಪುರ: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಏಖಅಖಿ),ಬೆಂಗಳೂರು ಹಾಗೂ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಬಿಜಿಎಸ್ ತಾಂತ್ರಿಕ ಸಂಸ್ಥೆ ಬಿ.ಜಿ. ನಗರ ಇವರ ಸಂಂ-ಯುಕ್ತ ಆಶ್ರಯದಲ್ಲಿ ಆಯೋಜಿಸಲಾದ 49ನೇ ಸರಣಿ ವಿದ್ಯಾರ್ಥಿ ಯೋಜನಾ ಕಾರ್ಯಕ್ರಮ (ಖಕಕ-2026) ಅಡಿಯಲ್ಲಿ 2026ರ ಜುಲೈ 17 ಮತ್ತು 18ರಂದು ನಡೆದ ರಾಜ್ಯಮಟ್ಟದ ಪೋಸ್ಟರ್ ಪ್ರಸ್ತುತಿ ಹಾಗೂ ಯೋಜನಾ ಪ್ರದರ್ಶನದಲ್ಲಿ ಬಿಎಲ್‌ಡಿಇ (ಡೀಮ್ಡ್ ವಿಶ್ವವಿದ್ಯಾಲಯ)ದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರಾದ ಸುಪ್ರೀತಾ ಆಸ್ಕಿ ಮತ್ತು ರುಚಿತಾ ಕುಂದರಗಿ ಅವರಿಗೆ ರಾಜ್ಯ ಮಟ್ಟದ ಅತ್ಯುತ್ತಮ ಸಂಶೋಧನಾ ಪ್ರಶಸ್ತಿ ಲಭಿಸಿದೆ.

ವಿದ್ಯಾರ್ಥಿನಿಯರು "Assessment of Vitamin D Receptor Gene Expression in Gestational Diabetes Mellitus (GDM) Patient from North Karnataka" ಎಂಬ ಸಂಶೋಧನಾ ಯೋಜನೆಯನ್ನು ಡಾ. ಜಿ. ಎಸ್. ಕಡಕೋಳ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ್ದರು. ರಾಜ್ಯದ ನಾನಾ ವಿಶ್ವವಿದ್ಯಾಲಯಗಳಿಂದ ಆಯ್ಕೆಯಾದ ಸಂಶೋಧನಾ ಯೋಜನೆಗಳ ನಡುವೆ ಇವರ ಯೋಜನೆ ಅತ್ಯುತ್ತಮ ಸಂಶೋಧನಾ ಯೋಜನೆಯಾಗಿ ಆಯ್ಕೆಯಾಗಿದ್ದು, ರಾಜ್ಯಮಟ್ಟದ ಪ್ರಶಸ್ತಿಯನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಕೀರ್ತಿ ತಂದಿದೆ.

ವಿದ್ಯಾರ್ಥಿನಿಯರ ಈ ಸಾಧನೆಗೆ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯ ಕುಲಾಧಿಪತಿ ಬಸನಗೌಡ ಎಂ. ಪಾಟೀಲ, ಸಮಕುಲಾಧಿಪತಿ, ಡಾ. ವೈ. ಎಂ. ಜಯರಾಜ, ಕುಲಪತಿ, ಡಾ. ಅರುಣ ಇನಾಮದಾರ, ಕುಲಸಚಿವ, ಡಾ. ಆರ್. ವಿ. ಕುಲಕರ್ಣಿ, ವೈದ್ಯಕೀಯ ವಿಭಾಗದ ಡೀನ ಹಾಗೂ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ, ಡೀನ ಅಲೈಡ ಹೆಲ್ತ ಸೈನ್ಸ, ಡಾ. ಎಸ್. ವಿ. ಪಾಟೀಲ ಅನ್ವಯಿಕ ವಿಜ್ಞಾನ ಮತ್ತು ತಂತ್ರಜ್ಞಾನ ಶಾಲೆಯ ಅಧ್ಯಾಪಕರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿ, ಮುಂದಿನ ಸಂಶೋಧನಾ ಕಾರ್ಯಗಳಿಗೂ ಇದೇ ರೀತಿಯ ಯಶಸ್ಸು ದೊರೆಯಲಿ ಎಂದು ಶುಭ ಹಾರೈಸಿದ್ದಾರೆ.

# ಕೃಷಿ ಚಟುವಟಿಕೆಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೂರ್‌ನಲ್ಲಿ ಹೈನುಗಾರಿಕೆ ಸಮಾಲೋಚನಾ ಸಭೆ । ಮಹಾಂತೇಶ್ ವಿ.ಎ. ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ. ಟ್ರಸ್ಟ್) ವತಿಯಿಂದ ಚಡಚಣ ತಾಲೂಕಿನ ಲೋಣಿ ಬಿ.ಕೆ. ವಲಯದ ತದ್ದೇವಾಡಿ ಕಾರ್ಯಕ್ಷೇತ್ರದ ಕೆರೂರ್ ಗ್ರಾಮದಲ್ಲಿ ಹೈನುಗಾರಿಕೆ ಸಮಾಲೋಚನಾ ಸಭೆಯನ್ನು ಆಯೋಜಿಸಿ ರೈತರು ಹಾಗೂ ಮಹಿಳೆಯರಿಗೆ ಕೃಷಿ ಮತ್ತು ಹೈನುಗಾರಿಕೆ ಕುರಿತ ವಿವಿಧ ಯೋಜನೆಗಳ ಮಾಹಿತಿ ಶನಿವಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ವಲಯದ ಮೇಲ್ವಿಚಾರಕರಾದ ಮಹಾಂತೇಶ್ ವಿ.ಎ., ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ಪ್ರತಿಯೊಂದು ಕುಟುಂಬವೂ ಕೃಷಿ ಆಧಾರಿತ ಚಟುವಟಿಕೆಗಳತ್ತ ಹೆಚ್ಚಿನ ಗಮನ ಹ-ರಿಸಬೇಕಾಗಿದೆ ಎಂದು ಹೇಳಿದರು. ಹೈನುಗಾರಿಕೆ, ದ್ವಿದಳ ಬೆಳೆಗಳ ಬೆಳವಣಿಗೆ, ಹೊಲ ಹದಗೊಳಿಸುವಿಕೆ, ಬೋರ್‌ವೆಲ್ ಕೊರೆಸುವುದು, ಆಕಳು ಹಾಗೂ ಆಡು ಸಾಕಾಣಿಕೆ, ದ್ರಾಕ್ಷಿ ಸಸಿ ನಾಟಿ ಹಾಗೂ ದ್ರಾಕ್ಷಿ ತೋಟದ ಆರೈಕೆ ಸೇರಿದಂತೆ ವಿವಿಧ ಕೃಷಿ ಚಟುವಟಿಕೆಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಹೈನುಗಾರಿಕೆ ಸಮಾಲೋಚನಾ ಸಭೆಗಳ ಮೂಲಕ ರೈತರಲ್ಲಿ ವೈಜ್ಞಾನಿಕ ಹೈನುಗಾರಿಕೆ ಬಗ್ಗೆ ಅರಿವು ಮೂಡಿಸಿ, ಹೈನುಗಾರಿಕೆಯನ್ನು ಲಾಭದಾಯಕ ಸ್ವಉದ್ಯೋಗವಾಗಿ ರೂಪಿಸಲು ಯೋಜನೆ ಉತ್ತೇಜನ ನೀಡುತ್ತಿದೆ ಎಂದು ಅವರು ಹೇಳಿದರು.

ಕೃಷಿ ಮೇಲ್ವಿಚಾರಕರಾದ ಸುದೀಪ್ ಮಾತನಾಡಿ, ರೈತ ಮಹಿಳೆಯರು ಹೈನುಗಾರಿಕೆಯನ್ನು ಸ್ವಉದ್ಯೋಗವನ್ನಾಗಿ ರೂಪಿಸಿಕೊಳ್ಳುವ ಅವಕಾಶಗಳ ಬಗ್ಗೆ ವಿವರಿಸಿದರು. ಪಶುಗಳ ಆರೋಗ್ಯ, ಚಿಕಿತ್ಸೆ, ಸಮರ್ಪಕ ಸಂಗೋಪನೆ ಹಾಗೂ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂ-ಎಫ್) ವತಿಯಿಂದ ದೊರೆಯುವ ಸೌಲಭ್ಯಗಳು ಮತ್ತು ಸಹಾಯಧನಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಹೈನುಗಾರಿಕೆ ಸ್ವಉದ್ಯೋಗ ಸದಸ್ಯ ರಮೇಶ ವಾಘಮೋರೆ ಮಾತನಾಡಿ, ಹೈನುಗಾರಿಕೆಯಿಂದ ಉತ್ತಮ ಆದಾಯ ಗಳಿಸುವ ಸಾಧ್ಯತೆಗಳ ಜೊತೆಗೆ ಯೋಜನೆಯಡಿ ದೊರೆಯುವ ಸಾಲ ಹಾಗೂ ಇತರೆ ಸೌಲಭ್ಯಗಳ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷೆ ಸುಬಾಂಗಿ ವಾಘಮೋರೆ, ಸ್ಥಳೀಯ ಸೇವಾ ಪ್ರತಿನಿಧಿ ವಿಮಲಾ ಗೌಡನೂರ, ರೈತ ಮಹಿಳೆಯರು ಹಾಗೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

# ಜು.22 ರಿಂದ 24 ವರೆಗೆ ಆರೋಗ್ಯ ಉಚಿತ ತಪಾಸಣಾ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವ್ಹಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಅಗದತಂತ್ರ ವಿಭಾಗದ ವತಿಯಿಂದ ಚರ್ಮ ಮತ್ತು ಕೂದಲಿಗೆ ಸಂಬಂಧಿಸಿದ ರೋಗಗಳಿಗಾಗಿ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.

**ಶಿಬಿರದಲ್ಲಿ ತಪಾಸಣೆ ಮಾಡಲಾಗುವ ಸಮಸ್ಯೆಗಳು:**

ಕೂದಲಿನ ಸಮಸ್ಯೆಗಳು: ಕೂದಲು ಉದುರುವಿಕೆ, ಕೂದಲು ಗಡಸುತನ, ಅಕಾಲಿಕವಾಗಿ ಕೂದಲು ಬೆಳ್ಳಗಾಗುವುದು, ಅಲ್ಲಲ್ಲಿ ವರ್ತುಲಾಕಾರದಲ್ಲಿ ಕೂದಲು ಉದುರುವಿಕೆ (Alopecia) ಮತ್ತು ತಲೆಹೊಟ್ಟು.

ಚರ್ಮದ ಸಮಸ್ಯೆಗಳು: ಭಂಗು (Pigmentation), ದೀರ್ಘಕಾಲದ ಮೊಡವೆ ಮತ್ತು ಕಲೆಗಳು, ಚರ್ಮ ಸುಕ್ಕುಗಟ್ಟುವಿಕೆ ಹಾಗೂ ಅಕಾಲಿಕ ನೆರಿಗೆಗಳು.

ಈ ಶಿಬಿರವು ಜುಲೈ 22, 23 ಮತ್ತು 24 ರಂದು ನಡೆಯಲಿದೆ. ಇಂತಹ ಸಮಸ್ಯೆಯನ್ನು ಎದುರಿಸುತ್ತಿರುವ ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಬಿ.ಎಲ್.ಡಿ.ಇ ಸಂಸ್ಥೆಯ ಎ.ವ್ಹಿ.ಎಸ್ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿಗಳಾದ ಡಾ. ಸಂಜಯ ಕಡ್ಲಿಮಟ್ಟಿ ಈ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: ಡಾ. ದಾಮೋದರ ನಾಯಕ: 8792121755 ಹಾಗೂ ಆಸ್ಪತ್ರೆಯ ಸಂಖ್ಯೆ: 9513397413 ಸಂಪರ್ಕಿಸಬಹುದಾಗಿದೆ.

# ಹಿಂದೂ ಹಬ್ಬಗಳ ಹಿಂದೆ ವಿಜ್ಞಾನವಿದೆ : ನಂದಿಕೇಶ್ವರಮಠ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಹಿಂದೂ ಧರ್ಮದಲ್ಲಿ ಪ್ರತಿಯೊಂದು ಹಬ್ಬಗಳಿಗೆ ತನ್ನದೇ ಆದ ವೈಶಿಷ್ಟತೆ ಮತ್ತು ಸಾಂಪ್ರದಾಯಿಕ ಹಿನ್ನೆಲೆ ಇದೆ. ಆದರೆ ಸಧ್ಯದ ದಿನಮಾನಗಳಲ್ಲಿ ಹಿಂದೂ ಹಬ್ಬಗಳ ಬಗ್ಗೆ ಕಂದಾಚಾರ, ಮೂಢನಂಬಿಕೆ ಎಂದು ಅಪಪ್ರಚಾರವಾಗುತ್ತಿರುವುದರ ಪರಿಣಾಮ ಹಿಂದೂ ಹಬ್ಬಗಳು ನಶಿಸಿ ಹೋಗುತ್ತಿವೆ. ಇಂತಹ ಮಾತುಗಳಿಗೆ ಕಿವಿಗೊಡದೇ ಪ್ರತಿಯೊಬ್ಬ ಹಿಂದೂಗಳು ಪ್ರತಿಯೊಂದು ಹಬ್ಬಗಳಲ್ಲಿ ಭಾಗಿಯಾಗಿ ಹಬ್ಬಗಳ ಹಿಂದೆ ವಿಜ್ಞಾನ ಇದೆ ಎಂದು ಸಮಾಜಕ್ಕೆ ಸಾರಿ ಹೇಳಬೇಕು ಎಂದು ಹೋರಾಟಗಾರ ಮತ್ತು ಹಿಂದು ಕಾರ್ಯಕರ್ತ ಬಸಯ್ಯ ನಂದಿಕೇಶ್ವರಮಠ ಕರೆ ನೀಡಿದರು.

ಪಟ್ಟಣದ ಮಾರುತಿ ನಗರದಲ್ಲಿ ಮಣ್ಣೆತ್ತಿನ ಅಮವಾಸ್ಯೆಯ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಮಣ್ಣೆತ್ತು ಪ್ರತಿಷ್ಠಾಪಿಸುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ನಮ್ಮ ದೇಶ ಉಳಿಯಲು ಕಾರಣನೇ ಹಿಂದೂ ಹಬ್ಬಗಳು. ಕಾಲ, ಋತು ಮತ್ತು ಕೃಷಿ ಚಟುವಟಿಕೆಗಳಿಗೆ ಅನುಗುಣವಾಗಿ ಹಿಂದೂ ಹಬ್ಬಗಳನ್ನು ಜೋಡಿಸಲಾಗಿದೆ. ಪ್ರತಿಯೊಂದು ಹಬ್ಬಗಳ ಆಚರಣೆಯ ಹಿಂದೆ ಸಾಮಾಜಿಕ ಹಾಗೂ ವೈಜ್ಞಾನಿಕ ಮಹತ್ವ ಅಡಗಿದೆ. ಹಬ್ಬಗಳು ಕುಟುಂಬ ಹಾಗೂ ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡುತ್ತವೆ. ಹಿಂದೂ ಸಂಪ್ರದಾಯ ಮತ್ತು ಹಬ್ಬಗಳ ಬಗ್ಗೆ ಯುವ ಜನತೆಗೆ ಅರಿವು ಮೂಡಿಸುವದು ಅಗತ್ಯವಾಗಿದ್ದು, ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಹಾಗಾಗಿ ಪ್ರತಿಯೊಬ್ಬ ಹಿಂದೂ ಎಲ್ಲ ಹಬ್ಬಗಳಲ್ಲಿ ಸಕ್ರೀಯವಾಗಿ ಭಾಗಿಯಾಗುವ ಮೂಲಕ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸಬೇಕು ಎಂದರು.

ಯುವ ಮುಖಂಡ ಸಂಗನಗೌಡ ಪಾಟೀಲ ಮಾತನಾಡಿ, ಇಂತಹ ಧಾರ್ಮಿಕ ಆಚರಣೆಗಳು ಕೇವಲ ಪೂಜಾ ವಿಧಾನಗಳಿಗೆ ಸೀಮಿತವಾಗಿರದೇ ಸಮಾಜದಲ್ಲಿ ಪರಸ್ಪರ ಸಹಕಾರ, ಬಾಂಧವ್ಯ ಮತ್ತು ಸಾಮರಸ್ಯವನ್ನು ಬೆಳೆಸುವ ವೇದಿಕೆಯಾಗಿವೆ ಎನ್ನುತ್ತ, ಪಟ್ಟಣದಲ್ಲಿಯೇ ಮಾರುತಿ ನಗರ ಶರಣರ ನಾಡಾಗಿದೆ. ಈ ಭಾಗದಲ್ಲಿ ಒಂದು ಭವ್ಯವಾದ ಜಗಜ್ಯೋತಿ ಬಸವಣ್ಣನವರ ದೇವಾಲಯವನ್ನು ನಿರ್ಮಿಸಬೇಕೆನ್ನುವದು ಬಹುತೇಕರ ಆಶಯವಾಗಿದೆ. ನಿಮ್ಮೆಲ್ಲರ ಸಹಕಾರ ಇದ್ದರೆ ಈ ಭಾಗದಲ್ಲಿ ಬಾಗೇವಾಡಿಯಲ್ಲಿರುವ ಬಸವಣ್ಣನವರ ದೇವಸ್ಥಾನದಂತೆ ಅದ್ಭುತ ದೇವಾಲಯವನ್ನು ನಿರ್ಮಿಸಲು ನಾವೆಲ್ಲ ಯುವಕರು ಹಗಲಿರುಳು ಶ್ರಮಿಸಲು ಸಿದ್ಧ-ರಿದ್ದೇವೆ ಎಂದರು.

ಮುಖಂಡ ಮಹಾಂತೇಶ ಮೋಟಗಿ ಮಾತನಾಡಿ, ಹಬ್ಬಗಳು ನಶಿಸಿ ಹೋಗುತ್ತಿರುವ ಹಿನ್ನೆಲೆಯಲ್ಲಿ ಹಬ್ಬಗಳನ್ನು ಪುನಶ್ಚೇತನಗೊಳಿಸಲು ವಾಟ್ಸಾಪ್ ಗುಂಪನ್ನು ತಯಾರಿಸಲಾಗಿದೆ. ಈ ಗುಂಪಿನಲ್ಲಿ ಪ್ರತಿಯೊಂದು ಹಬ್ಬಗಳನ್ನು ಅದ್ದೂರಿಯಾಗಿಸಲು ಏನೆಲ್ಲ ಪೂರ್ವಸಿದ್ಧತೆ ಮಾಡಬೇಕು ಎನ್ನುವ ಬಗ್ಗೆ ಪೂರ್ವ ಸಮಾಲೋಚನೆ ನಡೆಸಲಾಗುತ್ತದೆ. ಸಭೆ ಕರೆದಾಗ ಪ್ರತಿಯೊಬ್ಬರೂ ಭಾಗಿಯಾಗಿ ಸಲಹೆ ಸೂಚನೆ ನೀಡಬಹುದು ಎಂದರು.

ಪ್ರಮುಖರಾದ ವಿರೇಶ ಢವಳಗಿ, ಮಹಾಂತೇಶ ಬೂದಿಹಾಳಮಠ ಮಾತನಾಡಿದರು. ಮಹಾದೇವ ಶಾಸ್ತ್ರಿಗಳು ಆಶೀರ್ವಚನ ನೀಡಿದರು. ಲಾಲಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀಕಾಂತ ಹಿರೇಮಠ, ವಿಜು ಸೋನಾರ, ಮಾಂತಗೌಡ ಬಿರಾದಾರ ವಕೀಲರು, ಕಾಶಿನಾಥ ಹುಗ್ಗಿ, ಮಾಜಿ ಸೈನಿಕ ಎಸ.ವಿ.ಹೊಳಿ ಸೇರಿದಂತೆ ಮತ್ತೀತರರು ಇದ್ದರು.

# ಇಂಡಿಯಲ್ಲಿ ಹಜ್ ಯಾತ್ರಿಕರು & ನಿವೃತ್ತ ಶಿಕ್ಷಕರಿಗೆ ಸನ್ಮಾನ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ನಗರದ ಹೊಸೂರು ಕುಟುಂಬದ ವತಿಯಿಂದ ಹಜ್ ಯಾತ್ರೆ ನೆರವೇರಿಸಿ ಮರಳಿದ ಯಾತ್ರಿಕರು ಹಾಗೂ ನಿವೃತ್ತ ಶಿಕ್ಷಕರಿಗೆ ಆತ್ಮೀಯ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ನಗರದ ಶಿಕ್ಷಕ ಅಬುತಾಲಿಬ್ ಹೊಸೂರು ಅವರು ಕಳೆದ ಮೂವತ್ತು ವರ್ಷಗಳಿಂದ ಇಂಡಿ ನಗರದಿಂದ ಹಜ್ ಯಾತ್ರೆ ನೆರವೇರಿಸಿ ಬಂದ ಹಾ-ಜಿಗಳನ್ನು ತಮ್ಮ ನಿವಾಸಕ್ಕೆ ಆಹ್ವಾನಿಸಿ ಊಟೋಪಚಾರ ನೀಡಿ, ಸನ್ಮಾನಿಸುವ ಪರಂಪರೆಯನ್ನು ಮುಂದುವ-ರಿಸಿಕೊಂಡು ಬಂದಿದ್ದಾರೆ. ಈ ವರ್ಷವೂ ಅದೇ ಸಂಪ್ರದಾಯದಂತೆ ಹಜ್ ಯಾತ್ರಿಕರಿಗೆ ಗೌರವ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿವೃತ್ತರಾದ ಶಿಕ್ಷಕರನ್ನೂ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮೌಲಾನಾ ಜಿಯಾವುಲ್ ಹಕ್ ಉಮರಿ ಅವರು, "ಹೊಸೂರು ಕುಟುಂಬವು ಪ್ರತಿವರ್ಷ ಹಜ್ ಯಾತ್ರಿಕರನ್ನು ಗೌರವಿಸುವ ಕಾರ್ಯವನ್ನು ನಿಸ್ವಾರ್ಥವಾಗಿ ನಡೆಸಿಕೊಂಡು ಬರುತ್ತಿದೆ. ಹಜ್ ಇಸ್ಲಾಂ ಧರ್ಮದ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದ್ದು, ಆರ್ಥಿಕವಾಗಿ ಸಾಮರ್ಥ್ಯವಿರುವ ಪ್ರತಿಯೊಬ್ಬ ಮುಸ್ಲಿಮರ ಮೇಲೂ ಅದು ಕಡ್ಡಾಯವಾಗಿದೆ. ಹಜ್ ನೆರವೇರಿಸಿ ಮರಳಿದವರು ಹೊಸ ಜೀವನ ಆರಂಭಿಸಿದಂತಾಗುತ್ತದೆ. ಅಂತಹ ಯಾತ್ರಿಕರನ್ನು ಮನೆಗೆ ಆಹ್ವಾನಿಸಿ ಊಟೋಪಚಾರ ನೀಡಿ ಸನ್ಮಾನಿಸುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಬುತಾಲಿಬ್ ಹೊಸೂರು, ಮಹಿಬೂಬ್ ಗೌಂಡಿ, ಶಿಕ್ಷಕರ ಸಂಘದ ಅಧ್ಯಕ್ಷ ಅಲ್ತಾಫ್ ಬೋರಮಣಿ, ಅಲ್ಲಾಬಕ್ಷ ವಾಲೀಕಾರ, ಅಸ್ಲಾಂ ಪಟೇಲ್, ಬಾಬುಲಾಲ್ ಮುಜಾವರ್, ಇಲಿಯಾಸ್ ಬೋರಮಣಿ, ಹಸನ್ ಮುಜಾವರ್, ಬಶೀರ್ ಇನಾಮದಾರ್, ಇಸಾಕ್ ಮುಲ್ಲಾ, ಟಿಪ್ಪು ಸುಲ್ತಾನ್ ಹೊಸೂರು, ಅಲ್ಫಾಜ್ ಹೊಸೂರು, ರಫೀಕ್ ಬೋರಮಣಿ, ರಸೂಲ್ ಶೇಖ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ವಿವಿಧ ಕ್ರೀಡಾ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2026-27ನೇ ಸಾಲಿನ ಅರ್ಹ ಸಾಧಕ ಕ್ರೀಡಾಪಟುಗಳು ಹಾಗೂ ಇತರರಿಂದ ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನಿಸಿದೆ. ಈ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಲು ಜು.31 ಕೊನೆಯ ದಿನವಾಗಿದೆ.

2025 ಸಾಲಿನ ಏಕಲವ್ಯ ಪ್ರಶಸ್ತಿ, 2025ನೇ ಜೀವಮಾನ ಸಾಧನೆ ಪ್ರಶಸ್ತಿ, 2025ನೇ ಸಾಲಿನ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ, 2025ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ, 2025ನೇ ಗುರಿ-ಒಲಂಪಿಕ ಪದಕ ಪ್ರಶಸ್ತಿಗೆ ಅರ್ಹರು ಅರ್ಜಿ ಸಲ್ಲಿಸಬಹುದಾಗಿದೆ. ಈ ಪ್ರಶಸ್ತಿಗಳಿಗೆ ನಗದು ಪುರಸ್ಕಾರವಿದೆ.

ಅರ್ಹ ಕ್ರೀಡಾಪಟುಗಳು ಅರ್ಜಿಗಳನ್ನು ಅಧಿಕೃತ ಜಾಲತಾಣ https://sevasindu.karnataka.gov.in ಮೂಲಕ ಕಡ್ಡಾಯವಾಗಿ ಆನಲೈನ್ ಮೂಲಕ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ: 08352-251085 ಹಾಗೂ ಮೊ: 9535501872 ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ರಾಜಶೇಖರ ದೈವಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಂಥನಾಳ ಮಠದ ಉತ್ತರಾಧಿಕಾರಿ ಆಯ್ಕೆ ಪಾರದರ್ಶಕವಾಗಿದೆ: ಮುಳಜಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಬಂಥನಾಳ ಮಠದ ಉತ್ತರಾಧಿಕಾರಿ ಆಯ್ಕೆಯು ಅತ್ಯಂತ ಪಾರದರ್ಶಕವಾಗಿ ಮತ್ತು ಭಕ್ತರ ಸೌಹಾರ್ದಯುತ ಒಮ್ಮತದೊಂದಿಗೆ ನಡೆದಿದೆ. ಇದರಲ್ಲಿ ಯಾವುದೇ ಗೊಂದಲದ ಮಾತಿಲ್ಲ. ಆದರೆ ಕೆಲವರು ವೈಯಕ್ತಿಕ ದುರುದ್ದೇಶದಿಂದ ಸುಳ್ಳು ಸುದ್ದಿ ಹಾಗೂ ವದಂತಿಗಳನ್ನು ಹಬ್ಬಿಸುತ್ತಿದ್ದಾರೆ. ಭಕ್ತರು ಇಂತಹ ಯಾವುದೇ ಊಹಾಪೋಹಗಳಿಗೆ ಮನ್ನಣೆ ನೀಡಬಾರದು," ಎಂದು ನ್ಯಾಯವಾದಿ ಹಾಗೂ ಕರವೇ ಜಿಲ್ಲಾಧ್ಯಕ್ಷ ಶ್ರೀಶೈಲ ಮುಳಜಿ ಮನವಿ ಮಾಡಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರಾವಣ ಮಾಸದಲ್ಲಿ ನೂತನ ಉತ್ತರಾಧಿಕಾ-ರಿಗಳ ಪುರ ಪ್ರವೇಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಮಠದ ಸಮಿತಿ ನಿರ್ಧರಿಸಿದೆ. ಶೀಘ್ರದಲ್ಲೇ ಭಕ್ತರ ಸಭೆ ಕರೆದು ಅಧಿಕೃತ ದಿನಾಂಕವನ್ನು ನಿಗದಿಪಡಿಸಲಾಗುವುದು. ಈ ಧಾರ್ಮಿಕ ಮಹೋತ್ಸವದಲ್ಲಿ ಉತ್ತರ ಕರ್ನಾಟಕ ಭಾಗದ ಸಹಸ್ರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದು ಮುಳಜಿ ಮಾಹಿತಿ ನೀಡಿದರು.

ಒಮ್ಮತದ ಆಯ್ಕೆಗೆ ಭಕ್ತರ ಹರ್ಷ: ತಾಂಬಾ ಗ್ರಾಮದ ಹಿರಿಯ ಮುಖಂಡರಾದ ಜಿ. ವಾಯ್. ಗೊರನಾಳ ಮಾತನಾಡಿ, "ಬಂಥನಾಳ ಮಠವು ಕೋಟ್ಯಂತರ ಭಕ್ತರ ಶ್ರದ್ಧಾ ಕೇಂದ್ರವಾಗಿದೆ. ಮಠದ ಗರಿಮೆಗೆ ತಕ್ಕಂತೆ ಎಲ್ಲ ಭಕ್ತರ ಇಚ್ಛೆಯ ಮೇರೆಗೇ ಈ ಆಯ್ಕೆ ಪೂರ್ಣಗೊಂಡಿದೆ," ಎಂದು ಹರ್ಷ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ತಾಂಬಾ ಗ್ರಾಮದ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ರಾಜು ಗಂಗನಹಳ್ಳಿ, ರಾಜು ಗುಂಜುಟಗಿ, ಮಾಜಿ ತಾಲ್ಲೂಕು ಪಂಚಾಯತ್ ಸದಸ್ಯರಾದ ಪ್ರಕಾಶ್ ಮುಂಜಿ ಸೇ-ರಿದಂತೆ ಮಠದ ಸದ್ಭಕ್ತರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

# ಮಳೆಗಾಗಿ ಗುರ್ಜಿ ಪೂಜೆ ಮೊರೆ ಹೋದ ಮಹಿಳೆಯರು

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: "ಗುರ್ಜಿ, ಗುರ್ಜಿ ಹಳ್ಳಾಡಿ ಬಂದೆ, ಹಳ್ಳಕೊಳ್ಳ ತಿರಿಗ್ಯಾಡಿ ಬಂದೆ, ಕಾರ ಮಳೆಯೋ ಕಪ್ಪತ್ತು ಮಳೆಯೋ, ಸುರಿಸುರಿ ಸುರಿಯೋ ಮಳೆಯೋ".. ಎಂದು ಹಳ್ಳಿಗಳಲ್ಲಿ ಮಹಿಳೆಯರು ಮಳೆಗಾಗಿ ಮನೆ ಮನೆ ತಿರುಗುತ್ತಾ ಗುರ್ಜಿ ಹೊತ್ತು ಪ್ರಾರ್ಥನೆ ಸಲ್ಲಿಸಿದರು.

ತಾಲ್ಲೂಕಿನ ಕಳ್ಳಕವಟಗಿ ಗ್ರಾಮದಲ್ಲಿ ಶನಿವಾರ ಜಯಶ್ರೀ ಗಿಡ್ನವರ ಮಹಿಳೆಯ ತಲೆ ಮೇಲೆ ತವೆ ಇಟ್ಟು ಅದರ ಮೇಲೆ ಜಿಗಟು ಮಣ್ಣಿನಿಂದ ತಯಾರಿಸಿದ ಗುರ್ಜಿ ಮಾಡಿದ್ದರಿ. ಗುರ್ಜಿ ಹೊತ್ತ ಮಹಿಳೆಯು ಗುರ್ಜಿ ಗುರ್ಜಿ ಎಂದು ಹಾಡು ಹೇಳುತ್ತಾ ಗ್ರಾಮದ ಎಲ್ಲ ಮನೆ ಮುಂದೆ ಹೋಗಿ ನಿಲ್ಲುತ್ತಾರೆ. ಆಗ ಮನೆಯವರು ಬಂದು ಗುರ್ಜಿ ಹೊತ್ತವಳ ತಲೆ ಮೇಲೆ ನೀರು ಸುರಿದು ಗುರ್ಜಿ ಪೂಜೆ ಮಾಡಿ ಬೇಗ ಮಳೆ ಬಂದು ಭೂಮಿ ತಾಯಿ ತಂಪೆರಗಲಿ ಎಂದು ಪೂಜೆ ಮಾಡುತ್ತಾರೆ.

ಮಳೆ ಬಾರದೆ ಇದ್ದಾಗ ಪೂರ್ವಜರ ಕಾಲದಿಂದಲೂ ಗ್ರಾಮೀಣ ಪ್ರದೇಶಗಳಲ್ಲಿ ಹಿರಿಯರ ಕಾಲದಿಂದಲೂ ಆಚ-'ರಣೆಯಲ್ಲಿರುವ ಗುರ್ಜಿಪೂಜೆ ಹಳ್ಳಿಗಳಲ್ಲಿ ಮಹಿಳೆಯರು ವಿಶಿಷ್ಟವಾಗಿ ಆಚರಣೆ ಮಾಡುತ್ತಾರೆ. ಈ ರೀತಿ ಪೂಜೆ ಮಾಡುವುದರಿಂದ ಮಳೆ ಆಗುವ ನಂಬಿಕೆ ಹಳ್ಳಿಯ ಜನರಲ್ಲಿದೆ.

ಮಳೆ ಬರುವ ನಂಬಿಕೆಯಿಂದ ರೈತಾಪಿ ಜನ ಬಿತ್ತನೆ ಮಾಡಿದ್ದು, ಈಗ ಮಳೆಯ ಆಗಮನಕ್ಕಾಗಿ ರೈತರು ಆಕಾಶದೆತ್ತರಕ್ಕೆ ನೋಡುವಂತಾಗಿದೆ. ಮಳೆ ಇಲ್ಲದೇ ಜನ ಜಾನುವಾರಕ್ಕೂ ಸಹ ಸಂಕಟ ಎದುರಾಗಿದ್ದರಿಂ ಮಹಿಳೆಯರು ಗುರ್ಜಿ ಪೂಜೆಯ ಮೊರೆ ಹೋಗಿದ್ದಾರೆ.

ಜಯಶ್ರೀ ಗಿಡ್ನವರ, ಶ್ರೀದೇವಿ ಕಾಳೆ, ಮಾಜನ ಮುಲ್ಲಾ, ಕಾಶಿಬಾಯಿ ಬಗಲಿ, ಸುನಂದಾ ದೊಡಮನಿ, ಸೈರಾ ಮುಲ್ಲಾ, ಸವಿತಾ ಕರ್ಪೆ, ಬೌರವ್ವ ದಂಡಿನ, ಕಾಂತಾ ಝುಂಡೆ, ಶೃತಿ ಇಳಗೇರಿ ಹಾಗೂ ಗ್ರಾಮದ ಮಹಿಳೆಯರು ಇದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR